ಕಲ್ಯಾಣ ಕಿರಣ

ಆಗಸ್ಟ್-2017

ಬೆಲೆ - 20 ರೂ

ಬಸವ ಭಾರತಿ ಪದವಿ ಪೂರ್ವ ಕಾಲೇಜು ಕಟ್ಟಡ ಉದ್ಘಾಟನಾ ಸಮಾರಂಭ



ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಗೆ ಸನ್ಮಾನ



ವಿಶ್ವಗುರು ಬಸವಣ್ಣನವರ 822ನೆಯ ಲಿಂಗೈಕ್ಯ ಸಂಸ್ಮರಣೆಯ ಉದ್ಘಾಟನೆ

ಬಸವ ಪಂಚಮಿಯ ಸಿಹಿ ಕ್ಷಣಗಳು







ಪೂಜ್ಯ ಜಗದ್ಗುರು ಸ್ವಾಮಿ ಲಿಂಗಾನಂದ

ಪೂಜ್ಯ ಜಗದ್ಗುರು ಸ್ವಾಮಿ ಲಿಂಗಾನಂದ
ಸ್ವಾಮಿ ವಿವೇಕಾನಂದರ ವೇಷದಿಂದ ಬಂದ ‖ ಪ ‖
ಶರಣೆ ಕಲ್ಲಮ್ಮ ಮಲ್ಲಪ್ಪ ಉದರದಿಂದ
ಮಣಿಗವಳ್ಳಿ ಊರಲ್ಲಿ ಜನಿಸಿದ ಕಂದ
ಆ ನಾಮವು ಮನಸಿಗೆ ಪರಮಾನಂದ
ನುಡಿದರೆ ನಾಲಿಗೆ ಸಂಪಿಗೆ ಮಕರಂದ ‖ 1 ‖
ದೈವ ಹುಟ್ಟಿಸಿದ ಘಳಿಗೆ ಅದೆಷ್ಟು ಚಂದ
ಬಸವ ಬೆಳಕನ್ನು ಚೆಲ್ಲುತ್ತ ನಡೆದು ಬಂದ
ಅವರ ಕಾಲ್ನಡಿಗೆ ಕಂಗಳಿಗಾದವೇನಾನಂದ
ಅದು ಭಾಗ್ಯವೆನ್ನಿರೀ ಕನ್ನಡ ನೆಲದ ‖ 2 ‖
ಕಾವಿ ಕಾಷಾಂಬರ ಮೈ ಮೇಲೆ ಬಳಸಿ
ಅಂಗದ ಮೇಲೆ ಲಿಂಗ ರುದ್ರಾಕ್ಷಿ ಇರಿಸಿ
ನೊಸಲಲ್ಲಿ ವಿಭೂತಿ ಪಟ್ಟವ ಧರಿಸಿ
ತ್ಯಾಗ ಮಾಡಿ ಬಂದಾರಾ ಯೋಗಿ ಊರೂರ ಅರಸಿ ‖ 3 ‖
ನಾವು ಬಂದೇವು ಗುಡಿ ಗುಂಡಾರಗಳ ದೇವರ ಸುತ್ತಿ
ಕಲ್ಲನಾಗನಿಗೆ ಹಾಲೆರೆದು ಮಾಡಿದೆವು ಭಕ್ತಿ
ಪೂಜೆ ಮಾಡಿ ಕೈ ಮುಗಿದು ಬೇಡಿದೆವು ಮುಕ್ತಿ
ಆಗ ಹರಡಿತ್ತು ಲಿಂಗಾನಂದರ ಕೀರ್ತಿ ‖ 4 ‖
ಸ್ವಾಮಿ ಮೂಢಭಕ್ತರ ಮನವನ್ನು ಒಲಿಸಿ
ಕರಸ್ಥಲದಲ್ಲಿ ಇಷ್ಟಲಿಂಗವನ್ನು ಇರಿಸಿ
ಒಂದೇ ದೇವರ ಮೇಲೆ ಭಕ್ತಿಯ ಬರಿಸಿ
ಲಿಂಗಪೂಜಾ ವಿಧಾನದ ಸಾರವ ತಿಳಿಸಿ ‖ 5 ‖
ಕನ್ನಡ ನಾಡಿನ ತುಂಬೆಲ್ಲ ಸುತ್ತಿ
ಬಸವ ತತ್ವವ ಹೇಳ್ಯಾರ ಎಲ್ಲರಿಗೊತ್ತಿ
ಉಚ್ಚ ನೀಚ ಭೇದ ಭಾವವ ಕಿತ್ತಿ
ಹೋದಲೆಲ್ಲ ಹಚ್ಚ್ಯಾರ ಬಸವ ಜ್ಯೋತಿ ‖ 6 ‖
ಲಿಂಗದೇವರು ನಮ್ಮ ಧರ್ಮದ ದೇವರು
ವಿಶ್ವಕ್ಕೆ ಗುರು ಅಪ್ಪ ಬಸವಣ್ಣನವರು
ಎಂದು ಮನದಟ್ಟು ಮಾಡ್ಯಾರ ಲಿಂಗಾನಂದರು
ಲಿಂಗ ಕಟ್ಯಾರ ಕೊರಳಲ್ಲಿ ಎಲ್ಲಾ ಕುಲದವರು ‖ 7 ‖
ತಂಡೋಪತಂಡ ಜನ ಬಂದಾರ ನಡಕೊಂಡು
ಅಪ್ಪ ಹೇಳುವ ಪ್ರವಚನದ ಸಾರ ಮೆಚ್ಚಿಕೊಂಡು
ಬಸವ ಭಕ್ತರಾಗ್ಯಾರ ಲಿಂಗ ತತ್ವ ತಿಳಕೊಂಡು
ಎಲ್ಲರೂ ಲಿಂಗಾಯತ ಧರ್ಮ ಒಪ್ಪಿಕೊಂಡು ‖ 8 ‖
ಎಂಥ ಗುರುವು ಪೂಜ್ಯ ಅಪ್ಪಾಜಿಯವರು
ಲಿಂಗತತ್ವ ಬೋಧಿಸಿದ ಸಂತಪುರುಷರು
ನಾಡಿನ ಪ್ರವಚನ ಪಿತಾಮಹರು
ಎಲ್ಲಾ ಜನಮನದ ಬಾಯಲ್ಲಿ ಲಿಂಗಾನಂದರು ‖ 9 ‖

– ಅಡವೆಪ್ಪಾ ಎಸ್.ಪಟ್ಟೇ,
ಔರಾದ್-ತಾ

ಸಂಪುಟ-49 ಬಸವ ಶಕೆ -884 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-08 ಆಗಸ್ಟ್ - 2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಆಗಸ್ಟ್ ತಿಂಗಳಲ್ಲಿ ಬರುವ ಹಬ್ಬ ಹುಣ್ಣಿಮೆ

ಪೂಜ್ಯ ಲಿಂಗಾನಂದ ಅಪ್ಪಾಜಿಯವರ 87ನೆಯ ಜಯಂತಿ –	ಆಗಸ್ಟ್ 25
ರಾಷ್ಟ್ರೀಯ ಬಸವ ದಳದ ಹುಟ್ಟು –	ಆಗಸ್ಟ್ 25
ಪೂಜ್ಯ ಮಾತೆ ಗಂಗಾದೇವಿಯವರ 60ನೇ ವರ್ಧಂತಿ –	ಆಗಸ್ಟ್ 25
ಬಸವ ಜ್ಯೋತಿ ಸಮಾರೋಪ –	ಆಗಸ್ಟ್ 25

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹದಿನಾರನೆಯ

ಕಲ್ಯಾಣ ಪರ್ವ

2017ರ ಅಕ್ಟೋಬರ್ 03, 04 ಮತ್ತು 05ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 30ನೆಯ ಶರಣ ಮೇಳವು ಇದೇ 2017ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟದಡೆ
ಮರ್ತ್ಯಲೋಕವೆಲ್ಲವೂ ಭಕ್ತಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2017ನೆಯ ಇಸವಿಯಲ್ಲಿ 16ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಅಕ್ಟೋಬರ್ 03, 04 ಮತ್ತು 06ರಂದು ನಡೆಯಲಿದೆ.

ಮಂಗಳ(ಬಸವ)ವಾರ, ದಿ. 03ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ರಾಷ್ಟ್ರೀಯ ಬಸವ ದಳದ ಸಮಾವೇಶ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.04, ಬುಧ(ಚನ್ನ)ವಾರದಂದು ಬೆಳಿಗ್ಗೆ 07-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಬೆಳಿಗ್ಗೆ 10-30ಕ್ಕೆ ಸಾಮೂಹಿಕ ಪ್ರಾರ್ಥನೆ ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ ದಿ. 05 ಗುರು(ಪ್ರಭು)ವಾರ

ದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 02ರ ರಾತ್ರಿಯಿಂದ ಅಕ್ಟೋಬರ್ 06 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು. ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು : 15000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 10000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 5000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 3000 ರೂ
5. ಸ್ವಾಗತ ಸಮಿತಿ ಸದಸ್ಯತ್ವ : 600 ರೂ
6. ಪ್ರತಿನಿಧಿ ಶುಲ್ಕ : 300 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10000/15000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎:080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-252856/9448732456

ರಾಜ್ಯದ ವಿವಿಧೆಡೆ ಲಿಂಗಾಯತ ಮಹಾರ್‍ಯಾಲಿ

॥ ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗವಹಿಸಲು ಲಿಂಗಾಯತ ಧರ್ಮ ಮಹಾಸಭಾ ಕರೆ ॥

ಬೆಳಗಾವಿಯಲ್ಲಿ ಆಗಸ್ಟ್ 22ರಂದು ಮಹಾರ್‍ಯಾಲಿ

ಬೆಳಗಾವಿ ಜಿಲ್ಲಾ ಲಿಂಗಾಯತ ಸಮಾಜ ಮತ್ತು ಮಠಾಧೀಶರ ವೇದಿಕೆ ವತಿಯಿಂದ ಬೆಳಗಾವಿ ನಗರದ ಲಿಂಗರಾಜು ಕಾಲೇಜು ಆವರಣದಲ್ಲಿ ದಿನಾಂಕ– 22–8–2017ರಂದು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಗ್ರಹಿಸಿ ಲಿಂಗಾಯತ ಮಹಾರ್‍ಯಾಲಿಯನ್ನು ಆಯೋಜಿಸಲಾಗಿದೆ. ಮೂರು ಲಕ್ಷಕ್ಕೂ ಅಧಿಕ ಲಿಂಗಾಯತ ಬಾಂಧವರು ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ.

ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಡಾ॥ ಮಾತೆ ಮಹಾದೇವಿಯವರು ಮತ್ತು ನಾಗನೂರು ರುದ್ರಾಕ್ಷಿ ಮಠದ ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು ಒಳಗೊಂಡಂತೆ ಬೆಳಗಾವಿ, ಧಾರವಾಡ, ಬೀದರ್, ಕಲಬುರಗಿ ಮುಂತಾದ ಜಿಲ್ಲೆಗಳ ಲಿಂಗಾಯತ ಮಠಾಧೀಶರು, ಪೀಠಾಧಿಕಾರಿಗಳು ಈ ಲಿಂಗಾಯತ ಮಹಾರ್‍ಯಾಲಿ ನೇತೃತ್ವ ವಹಿಸಲಿದ್ದಾರೆ. ಮಹಾರಾಷ್ಟ್ರದ ಅಹ್ಮದಪುರ ಮಠದ ಶತಾಯುಷಿಗಳಾದ ಪೂಜ್ಯ ಶ್ರೀ ರಾಷ್ಟ್ರ ಸಂತ ಶಿವಲಿಂಗ ಶಿವಾಚಾರ್ಯರು ಸಹ ರ್‍ಯಾಲಿಯಲ್ಲಿ ಸಾನಿಧ್ಯ ವಹಿಸಲಿದ್ದಾರೆ. ಬೀದರ್ ರ್‍ಯಾಲಿಯಲ್ಲಿ ಭಾಗವಹಿಸಿರುವ ಎಲ್ಲ ಪೂಜ್ಯರು ಬೆಳಗಾವಿಯಲ್ಲಿ ನಡೆಯಲಿರುವ ಆಗಸ್ಟ್ 22ರ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ. ಪಕ್ಷಾತೀತವಾಗಿ ಎಲ್ಲ ರಾಜಕೀಯ ಪಕ್ಷಗಳ ಲಿಂಗಾಯತ ಮುಖಂಡರು ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಕಲಬುರ್ಗಿಯಲ್ಲಿ ಆಗಸ್ಟ್ 26ರಂದು ಮಹಾರ್‍ಯಾಲಿ

ಈ ಎಲ್ಲ ಪೂಜ್ಯರ, ಮಠಾಧೀಶರ ನೇತೃತ್ವದಲ್ಲಿ ಕಲಬುರ್ಗಿಯ ಸುಲಫಲ ಮಠದ ಪೂಜ್ಯ ಜಗದ್ಗುರು ಶ್ರೀ ಸಾರಂಗಧರ ದೇಶಿಕೇಂದ್ರ ಸ್ವಾಮಿಗಳು ಸೇರಿದಂತೆ ಎಲ್ಲ ಲಿಂಗಾಯತ ರಾಜಕೀಯ ಮುಖಂಡರು ಸೇರಿ ಕಲಬುರ್ಗಿಯಲ್ಲಿ ಆಗಸ್ಟ್ 26ರಂದು ಲಿಂಗಾಯತ ಮಹಾರ್‍ಯಾಲಿ ಆಯೋಜಿಸಿದ್ದಾರೆ.

ಲಾತೂರಿನಲ್ಲಿ ಆಗಸ್ಟ್ 26ರಂದು ಮಹಾರ್‍ಯಾಲಿ

ಮಹಾರಾಷ್ಟ್ರದ ಲಾತೂರಿನಲ್ಲಿ ಸೆಪ್ಟೆಂಬರ್ 3ರಂದು ಲಿಂಗಾಯತ ಮಹಾರ್‍ಯಾಲಿ ನಡೆಯಲಿದೆ.

ಈ ಮೂರು ಕಡೆ ನಡೆಯುವ ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸವಾಭಿಮಾನಿಗಳು ಆಗಮಿಸಬೇಕೆಂದು ಕೋರುತ್ತೇವೆ.

– ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ
ರಾಷ್ಟ್ರಾಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಲಿಂಗಾಯತ ಒಂದು ಸ್ವತಂತ್ರ ಧರ್ಮ

(ಒಂದು ವಿಶ್ಲೇಷಣೆ)

– ಎಸ್.ಎಂ. ಜಾಮದಾರ

ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಘೋಷಿಸುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಬೆಂಬಲ ವ್ಯಕ್ತಪಡಿಸಿದ್ದು ಭಿನ್ನ ಭಿನ್ನ ಪ್ರತಿಕ್ರಿಯೆಗಳಿಗೆ ಅವಕಾಶ ಕಲ್ಪಿಸಿದೆ. ಅದು ಮುಂಬರುವ ಚುನಾವಣೆಗೆ ಲಿಂಗಾಯತರನ್ನು ಒಲಿಸುವ ತಂತ್ರವೆಂಬುದು ಕೆಲವರ ವ್ಯಾಖ್ಯಾನ. ಡಾ|| ಚಿದಾನಂದ ಮೂರ್ತಿ ಅವರಂಥವರು ಅದನ್ನು ವಿರೋಧಿಸಿದ್ದಾರೆ. ಮಲ್ಲೇಪುರಂ ವೆಂಕಟೇಶ್ ಅವರು ವೀರಶೈವರ 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥವು ಅನ್ವಯಿಕ ಗ್ರಂಥವೆಂದು ಹೇಳಿದ್ದಾರೆ. ಅದರರ್ಥವೇನು ಎಂಬುದನ್ನು ಅವರು ಸ್ಪಷ್ಟಪಡಿಸಿಲ್ಲ. ಈ ಕೆಲವು ಗೊಂದಲಗಳ ವಿಶ್ಲೇಷಣೆ ಇಲ್ಲಿದೆ.

ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಘೋಷಿಸಬೇಕೆಂಬ ಬೇಡಿಕೆ ಹಳೆಯದು. ಅದು ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಮಹಾರಾಷ್ಟ್ರ, ತೆಲಂಗಾಣ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ಲಿಂಗಾಯತರೂ ಅದರಲ್ಲಿ ಭಾಗಿಗಳು. ಬಸವ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸುವ ಆದೇಶವನ್ನು 2002ರಲ್ಲಿ ಮೊದಲು ಪ್ರಕಟಿಸಿದ್ದು ಮಹಾರಾಷ್ಟ್ರ ಸರ್ಕಾರ, ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಹಾಕುವ 2017ರ ಆದೇಶವೂ ಅದೇ ರಾಜ್ಯದ್ದು. ಈಗ ಸಿದ್ಧರಾಮಯ್ಯನವರ ಭರವಸೆಯಿಂದ ಅವರೆಲ್ಲ ಕರ್ನಾಟಕದತ್ತ ನೋಡುತ್ತಿದ್ದಾರೆ.

ದಶವಾರ್ಷಿಕ ಜನಗಣತಿಯಲ್ಲಿ ಲಿಂಗಾಯತವನ್ನು ಪ್ರತ್ಯೇಕ ಧರ್ಮವೆಂದು ಪರಿಗಣಿಸುವಂತೆ ಕೇಂದ್ರ ಸರ್ಕಾರವನ್ನು ಲಿಂಗಾಯತ ಸಂಘಟನೆಗಳು ಅನೇಕ ಸಲ ವಿನಂತಿಸಿಕೊಂಡಿವೆ. ಲಿಂಗಾಯತವು ಹಿಂದೂ ಧರ್ಮದ ಒಂದು ಪಂಥವೇ ಹೊರತು ಪ್ರತ್ಯೇಕ ಧರ್ಮವಲ್ಲವೆಂದು ಜನಗಣತಿ ಆಯುಕ್ತರು ಉತ್ತರಿಸಿದ್ದಾರೆ. ಹಾಗಾದರೆ 'ಪಂಥಕ್ಕೂ' 'ಧರ್ಮಕ್ಕೂ' ಇರುವ ಅಂತರವೇನು, ಲಿಂಗಾಯತವು ಸ್ವತಂತ್ರ ಧರ್ಮವಾಗಿದ್ದರೆ, ಅದು ಹಿಂದೂ ಧರ್ಮಕ್ಕಿಂತ ಹೇಗೆ ಭಿನ್ನವಾಗಿದೆ ಮತ್ತು 'ಧರ್ಮ' ಎನಿಸಿಕೊಳ್ಳಲು ಇರಬೇಕಾದ ಮೂಲ ಲಕ್ಷಣಗಳೇನು ಎನ್ನುವ ಪ್ರಶ್ನೆಗಳು ಉದ್ಭವಿಸಿವೆ. ಈ ಪ್ರಶ್ನೆಗಳಿಗೆ ಸಮರ್ಥವಾಗಿ ಈವರೆಗೆ ಉತ್ತರಿಸಲಾಗಿಲ್ಲ. ಅದೇ ವಿಫಲತೆಗೆ ಕಾರಣವಾಗಿದೆ. ಅದಕ್ಕೆ ಆಳವಾದ ಶಾಸ್ತ್ರೀಯ ಅಧ್ಯಯನ ಅಗತ್ಯ. ಕೇವಲ ರಾಜಕೀಯ ಪ್ರಭಾವ ಸಾಕಾಗದು.

ಸಂವಿಧಾನ ರಚನಾ ಸಭೆಯಲ್ಲಿಯೇ ಲಿಂಗಾಯತ ಧರ್ಮದ ಬಗ್ಗೆ ಪ್ರಸ್ತಾಪವಾಗಿತ್ತು. 'ಹಿಂದೂ ಧರ್ಮದ' ವ್ಯಾಖ್ಯಾನ ಮತ್ತು ಏಕರೂಪ ನಾಗರಿಕ ಸಂಹಿತೆ ಕುರಿತು ನಡೆದ ಸುದೀರ್ಘ ಚರ್ಚೆಗಳಲ್ಲಿ ಮದ್ರಾಸಿನ ಪ್ರತಿನಿಧಿ ಕೆ. ಸಂಥಾನಮ್ ಹಾಗೂ ನಾಲ್ಕುಜನ

ಲಿಂಗಾಯತ ಸದಸ್ಯರಾದ ಮುಂಬೈ ರಾಜ್ಯದ ಪ್ರತಿನಿಧಿ ಎಸ್. ನಿಜಲಿಂಗಪ್ಪ, ಮೈಸೂರಿನ ಪ್ರತಿನಿಧಿ ಎಚ್. ಸಿದ್ಧವೀರಪ್ಪ, ಭಾರತೀಯ ರಾಜರ ಪ್ರತಿನಿಧಿಯಾಗಿದ್ದ ರಾಮದುರ್ಗದ ಬಿ.ಎನ್. ಮುನವಳ್ಳಿ ಮತ್ತು ಮಹಾರಾಷ್ಟ್ರದ ಲಿಂಗಾಯತ ನಾಯಕ ರತ್ನಪ್ಪ ಕುಂಬಾರ ಆ ಚರ್ಚೆಯಲ್ಲಿ ಮಂಡಿಸಿದ ಅಂಶಗಳು ಪ್ರತ್ಯೇಕ ಧರ್ಮದ ಬೇಡಿಕೆಗೆ ಈಗಲೂ ಸಮಂಜಸವಾಗಿವೆ.

ಹಿಂದೂ ವಿವಾಹ ಕಾಯ್ದೆ ಮತ್ತು ಇತರ ಮೂರು ಹಿಂದೂ ಕೌಟುಂಬಿಕ ಕಾನೂನುಗಳಲ್ಲಿ 'ಹಿಂದೂ' ಎಂಬ ಪದದ ವ್ಯಾಖ್ಯಾನವಿದೆ. ಅದರಲ್ಲಿ 'ವೀರಶೈವ ಅಥವಾ ಲಿಂಗಾಯತ, ಬೌದ್ಧ, ಜೈನ, ಸಿಖ್' ಧರ್ಮಗಳನ್ನು ವಿಶೇಷವಾಗಿ ಹೆಸರಿಸಿ ಹಿಂದೂ ಧರ್ಮದ ವ್ಯಾಖ್ಯಾನದಲ್ಲಿ ಸೇರಿಸಲಾಗಿದೆ. ಆ ನಾಲ್ಕೂ ಧರ್ಮಗಳು ಪ್ರತ್ಯೇಕ ಧರ್ಮಗಳೆಂದು ಆಗಿನ ಕಾನೂನು ತಜ್ಞರು ತಿಳಿದಿದ್ದರು ಎಂಬುದು ಅದರಿಂದ ಸ್ಪಷ್ಟವಾಗುತ್ತದೆ. ಭಾರತೀಯರಲ್ಲಿ 'ರಾಷ್ಟ್ರೀಯ ಪರಿಕಲ್ಪನೆ' ಮೂಡಿಸುವುದು ಅಂದಿನ ರಾಷ್ಟ್ರ ನಾಯಕರ ಆದ್ಯತೆಯಾಗಿತ್ತು. ಅದನ್ನು ಕೆ.ಎಂ. ಮುನಿ ಮತ್ತು ಸರ್ದಾರವಲ್ಲಭಬಾಯಿ ಪಟೇಲರು ಸಂವಿಧಾನ ರಚನಾ ಸಭೆಯಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ಧರ್ಮದ ಆಧಾರದ ಮೇಲೆ ವಿಭಜನೆಗೊಂಡ ದೇಶದಲ್ಲಿ ಅಲ್ಪಸಂಖ್ಯಾತರನ್ನು ಬಿಟ್ಟು ಬಹುಸಂಖ್ಯಾತರಾದ ಹಿಂದೂ ಮತ್ತು ಹಿಂದೂಯೇತರ ಭಾರತೀಯ ಧರ್ಮಗಳ ಜನರು ಹಿಂದೂ ಎಂದು ಗುರುತಿಸಿಕೊಂಡರೆ ದೇಶದ ಏಕತೆಗೆ ಸಹಾಯವಾಗುತ್ತದೆ ಎಂಬ ನಂಬಿಕೆ ಆ ವ್ಯಾಖ್ಯಾನದ ಹಿಂದಿದೆ. ಆದರೆ ಈಗ ಕಾಲ ಬದಲಾಗಿದೆ. ಎಲ್ಲಾ ಧರ್ಮಗಳ ಜನರನ್ನು, ಅವರಾಡುವ ಭಾಷೆ, ತಿನ್ನುವ ಆಹಾರ, ಉಡುವ ತೊಡುಗೆ, ಜೀವನ ಶೈಲಿಗಳನ್ನೂ ಬದಲಿಸಿ 'ಹಿಂದೂಕರಣ' ಗೊಳಿಸುವ ಪ್ರಯತ್ನಗಳು ದೇಶದಲ್ಲಿ ನಡೆಯುತ್ತಿವೆ. ಆದ್ದರಿಂದ 1950ರ ದಶಕದಲ್ಲಿ 'ಹಿಂದೂ ಎನಿಸಿಕೊಳ್ಳಲು ಹಿಂಜರಿಯದ ಇತರರು ಈಗ ತಮ್ಮ ಅಸ್ಮಿತೆ ಕಾಯ್ದುಕೊಳ್ಳಲು ತಯಾರಾಗುತ್ತಿದ್ದಾರೆ.

ರಾಷ್ಟ್ರೀಯ ಭಾವೈಕ್ಯತೆಗಾಗಿ ಧಾರ್ಮಿಕ ಸ್ವರೂಪದ ಕೌಟುಂಬಿಕ ಕಾನೂನುಗಳನ್ನು ರದ್ದುಪಡಿಸುವ ಬದಲು ಹಿಂದೂ ಕಾನೂನನ್ನು ಆಧುನೀಕರಣಗೊಳಿಸಲಾಯಿತು. ತಮ್ಮ ಉದ್ದೇಶಕ್ಕೆ ಹೆಚ್ಚು ಸಹಾಯವಾಗಬಲ್ಲ ಏಕರೂಪದ ನಾಗರಿಕ ಸಂಹಿತೆಯನ್ನು ರೂಪಿಸಲು ಅಂದಿನ ನಮ್ಮ ನಾಯಕರಿಗೆ ಸಾಧ್ಯವಾಗಲಿಲ್ಲ. ಇಂದಿಗೂ ಸಾಧ್ಯವಾಗಿಲ್ಲ. ಆದರೆ ಅಗಿನ ನಾಯಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಏಕತೆಯ ಹೆಸರಿನಲ್ಲಿ ಭಾರತದಲ್ಲಿ ಹುಟ್ಟಿದ 'ಹಿಂದೂಯೇತರ' ಧರ್ಮಗಳ ಅಸ್ತಿತ್ವವನ್ನು ಅಲ್ಲಗಳೆದು ಅವನ್ನು 'ಹಿಂದೂ'ದಲ್ಲಿ ಸುಲಭವಾಗಿ ಸೇರಿಸಿಬಿಟ್ಟರು!

ವಿಪರ್ಯಾಸವೆಂದರೆ, ಹಿಂದೂ ಕೌಟುಂಬಿಕ ಕಾನೂನುಗಳನ್ನು ಹಿಂದೂಯೇತರ ಭಾರತೀಯ ಧರ್ಮಗಳ ಅನುಯಾಯಿಗಳ ಮೇಲೆ ಹೇರಿದ ನಂತರವೂ ಅವರಿಗೆ ಧಾರ್ಮಿಕ ಸ್ವಾತಂತ್ರ್ಯ ಇದೆಯೆಂದು ಹೇಳುವುದು ವ್ಯಂಗ್ಯವಲ್ಲವೇ? ಲಿಂಗಾಯತ, ಬೌದ್ಧ, ಜೈನ,

ಸಿಖ್ ಧರ್ಮಗಳು ಹಿಂದೂ ಧರ್ಮದ ವಿರುದ್ಧ ಸಿಡಿದೆದ್ದ ಧರ್ಮಗಳು. ಆದ್ದರಿಂದ ಅವು ಹಿಂದೂ ಹೇಗಾಗುತ್ತವೆ? ಬೌದ್ಧ ಧರ್ಮ ಭಾರತದಿಂದ ಪಲಾಯನಗೈದು ಚೀನಾ, ಕೊರಿಯಾ, ಜಪಾನ್, ವಿಯೆಟ್ನಾಂ, ಕಾಂಬೋಡಿಯ, ಶ್ರೀಲಂಕಾ, ಥಾಯ್ಲೆಂಡ್‌ನಂತಹ ದೇಶಗಳಲ್ಲಿ ಪ್ರಮುಖ ಧರ್ಮವಾಗಿದೆ. ಹಾಗಾದರೆ, ಆ ದೇಶಗಳು ಹಿಂದೂ ರಾಷ್ಟ್ರಗಳೇ?

'ಸ್ವಾಮಿನಾರಾಯಣ ಪಂಥವನ್ನು' ಪ್ರತ್ಯೇಕ ಧರ್ಮವೆಂದು ಪರಿಗಣಿಸುವ ಸಲುವಾಗಿ ನಡೆದ ವ್ಯಾಜ್ಯದಲ್ಲಿ ಸರ್ವೋಚ್ಚ ನ್ಯಾಯಾಲಯ ಅವರ ವಿನಂತಿಯನ್ನು ಮಾನ್ಯ ಮಾಡಲಿಲ್ಲ. ಆ ಪ್ರಕರಣದ ತೀರ್ಪಿನ ಸುದೀರ್ಘ ಚರ್ಚೆ ಇಲ್ಲಿ ಸಮಂಜಸವಾಗಿದೆ. ಅದರಲ್ಲಿ ಡಾ॥ ಎಸ್. ರಾಧಾಕೃಷ್ಣನ್ ಅವರ 'ಹಿಂದೂ ಜೀವನಕ್ರಮ' ಪುಸ್ತಕದ ಮಾತನ್ನು ಉದ್ದರಿಸಲಾಗಿದೆ. ಡಾ॥ ರಾಧಾಕೃಷ್ಣನ್ ಅವರು. 'ಬಸವನು ಲಿಂಗಾಯತ ಧರ್ಮವನ್ನು ಸ್ಥಾಪಿಸಿದನು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಕೊನೆಯಲ್ಲಿ ಬೌದ್ಧ, ಜೈನ, ಸಿಖ್ಖ ಧರ್ಮಗಳೊಂದಿಗೆ ಲಿಂಗಾಯತವೂ ಹಿಂದೂ ಧರ್ಮದ ಒಂದು 'ಪಂಥವೆಂದು' ಅಭಿಪ್ರಾಯಪಟ್ಟಿದ್ದಾರೆ. ಅದು ಹಿಂದೂ ಜೀವನಕ್ರಮಕ್ಕೆ ಸಂಬಂಧಿಸಿದ್ದೇ ಹೊರತು ಧರ್ಮದ ವಿಶ್ಲೇಷಣೆಗಲ್ಲ ಮತ್ತು ಆ ಅಭಿಪ್ರಾಯವನ್ನು ಹಿಂದೂ ಧರ್ಮದ ಕಟ್ಟಾಭಿಮಾನಿಯೊಬ್ಬರ ಪೂರ್ವಗ್ರಹ ಪೀಡಿತ ಅಭಿಪ್ರಾಯವೆಂದೇ ತಿಳಿಯಬಹುದು.

ಶಾಸ್ತ್ರೀಯವಾಗಿಯೇ ಲಿಂಗಾಯತವು ಹಿಂದೂ ಧರ್ಮದ ಭಾಗವಲ್ಲ; ಅದೊಂದು ಸ್ವತಂತ್ರ ಧರ್ಮವೆಂದು ಧಾರಾಳವಾಗಿ ಸಿದ್ಧಪಡಿಸಲು ಸೂಕ್ತ ಬೌದ್ಧಿಕ ಸಾಮಗ್ರಿ ಲಭ್ಯವಿದೆ. ಅಂಥ ತಜ್ಞರೂ ಇದ್ದಾರೆ. ಅವರ ಸಹಾಯದಿಂದ ಲಿಂಗಾಯತ ದರ್ಶನ, ತತ್ವಶಾಸ್ತ್ರ, ಇತಿಹಾಸ, ಧಾರ್ಮಿಕ ನಂಬಿಕೆಗಳು, ಆಚರಣೆಗಳು, ವಿಧಿ ವಿಧಾನಗಳು, ಧರ್ಮ ಗುರುಗಳು, ಧಾರ್ಮಿಕ ಲಾಂಛನಗಳು, ಧಾರ್ಮಿಕ ಸ್ಥಳಗಳ ಬಗ್ಗೆ ಪರಿಣಾಮಕಾರಿ ವಾದವನ್ನು ಜನಗಣತಿ ಆಯುಕ್ತರ ಮುಂದೆ 2012ರ ಜನಗಣತಿಗಿಂತ ಮೊದಲೇ ಮಂಡಿಸಬೇಕಾಗಿದೆ. ಅದನ್ನು ಅವರು ಒಪ್ಪದಿದ್ದರೆ ಸರ್ವೋಚ್ಚ ನ್ಯಾಯಾಲಯವೇ ಮುಂದಿನ ದಾರಿ.

ಆದರೆ ಮುಖ್ಯಮಂತ್ರಿಗಳು ನೀಡಿದ ಭರವಸೆಯನ್ನು ಸಾಕಾರಗೊಳಿಸಿಕೊಳ್ಳಲು ಲಿಂಗಾಯತರಲ್ಲಿಯೇ ಅನೇಕ ಭಿನ್ನಾಭಿಪ್ರಾಯಗಳಿವೆ. ಪಂಗಡಗಳಿವೆ. ಅಂತರಿಕ ವೈರುಧ್ಯಗಳಿವೆ. ಪ್ರತಿಯೊಂದು ಲಿಂಗಾಯತ ಉಪ ಜಾತಿಗೂ ಒಬ್ಬೊಬ್ಬ ಧರ್ಮಗುರು ಇತ್ತೀಚೆಗೆ ಹುಟ್ಟಿಕೊಂಡಿದ್ದಾರೆ. ಅವರವರಲ್ಲಿಯೇ ಸಾಕಷ್ಟು ಪೈಪೋಟಿ, ವೈಮನಸ್ಸು ಮತ್ತು ಗುಂಪುಗಾರಿಕೆಗಳಿವೆ. ಅವೇ ಈಗ ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಸಿದ್ಧ ಮಾಡುವ ಸುಲಭ ಪ್ರಯತ್ನದಲ್ಲಿ ದೊಡ್ಡ ಬಂಡೆಗಲ್ಲಾಗಬಹುದು.

ಸುಮಾರು 900 ವರ್ಷಗಳ ಹಿಂದೆ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವು ವೈದಿಕ ಹಿಂದೂ ಧರ್ಮಕ್ಕೆ ವಿರುದ್ಧವಾದದ್ದು. ಅದು ವರ್ಣಾಶ್ರಮ ಧರ್ಮವನ್ನು

ತಿರಸ್ಕರಿಸುತ್ತದೆ. ಹೆಣ್ಣು–ಗಂಡು, ಜತಿ ತಾರತಮ್ಯ ಹೋಗಲಾಡಿಸಿ ಸಮಾನತೆ ಸಾರಿದೆ. ಕರ್ಮ ಸಿದ್ಧಾಂತ ತಿರಸ್ಕರಿಸಿ ಕಾಯಕಕ್ಕೆ ಮಹತ್ವ ನೀಡಿ ಕೆಳವರ್ಗದ ಸಮುದಾಯಗಳ ಅಭ್ಯುದಯಕ್ಕೆ ನಾಂದಿ ಹಾಡಿದೆ. ಅವರೆಲ್ಲರನ್ನೂ ಒಳಗೊಂಡ ಪ್ರಥಮ ಧರ್ಮ ಸಂಸತ್ತನ್ನು ಸ್ಥಾಪಿಸಿದ ಹೆಗ್ಗಳಿಕೆ ಲಿಂಗಾಯತ ಧರ್ಮದ್ದು. ಅದು ಪುನರ್ಜನ್ಮ ತಿರಸ್ಕರಿಸಿ, ಇಹಲೋಕ–ಪರಲೋಕದ ನಂಬಿಕೆಯನ್ನು ಬುಡಮೇಲು ಮಾಡಿದೆ. ಮಂದಿರ ಸ್ಥಾಪಿತ ವಿಗ್ರಹ ಪೂಜೆಯನ್ನು ಬದಲಿಸಿ ಇಷ್ಟಲಿಂಗದ ಮೂಲಕ ಪುರೋಹಿತಶಾಹಿಯ ಬೆನ್ನುಮೂಳೆ ಮುರಿದಿದೆ. ವೇದ ಆಗಮಗಳ ಯಜಮಾನಿಕೆಯನ್ನು ಬದಿಗಿಟ್ಟು ಶರಣರ ಲೋಕಾನುಭವದ ವಚನ ಸಾಹಿತ್ಯಕ್ಕೆ ಪ್ರಾಧಾನ್ಯ ನೀಡಿದೆ. ಪಾಮರರಿಗೆ ಅರ್ಥವಾಗದ ಸಂಸ್ಕೃತವನ್ನು ಬದಿಗಿರಿಸಿ ಅಚ್ಚಕನ್ನಡ ಬೆಳೆಸಿದೆ. ದಾಸೋಹದ ಮೂಲಕ ಸಾಮಾಜಿಕ ಮಹತ್ವ ಎತ್ತಿ ಹಿಡಿದಿದೆ. ಬಹುದೇವೋಪಾಸನೆಯನ್ನು ತಿರಸ್ಕರಿಸಿ ಏಕದೇವೋಪಾಸನೆಗೆ ಒತ್ತು ನೀಡಿದೆ. ಅದ್ದರಿಂದಲೇ ಬಸವನನ್ನು ಇಂದು ಮಹಾ ಮಾನವತಾವಾದಿ ಎಂದು ಜಾಗತಿಕವಾಗಿಯೂ ಗುರುತಿಸಲಾಗಿದೆ. ಅವನ ತತ್ವಗಳಿಗೆ ಮನ್ನಣೆ ನೀಡಿದ ನಮ್ಮ ಸಂಸತ್ತು ಬಸವನ ಮೂರ್ತಿಯನ್ನು ತನ್ನ ಆವರಣದಲ್ಲಿ ಸ್ಥಾಪಿಸಿದೆ.

ಲಿಂಗಾಯತದ ಹಿನ್ನೆಲೆ ಹೀಗಿದ್ದರೂ ಅದನ್ನು ಮತ್ತೆ ತಿರುಚಿ ಹಿಂದೂ ಕರಣಗೊಳಿಸುವ ಪ್ರಯತ್ನಗಳನ್ನು ಲಿಂಗಾಯತ ಧರ್ಮದ ಒಂದು ಪಂಗಡವೇ ಮಾಡುತ್ತಿದೆ. 'ವೀರಶೈವ' ಪದ ಪ್ರಯೋಗವೇ ಅದಕ್ಕೊಂದು ಉದಾಹರಣೆ. ವೀರಶೈವವು ಹಿಂದೂ ಶೈವಿಸಮ್‌ನ ಒಂದು ಶಾಖೆ ಎಂದು ಸಾಧಿಸುವುದು ಅದರ ಉದ್ದೇಶ. ಉತ್ತರ ಕರ್ನಾಟಕದ ಲಿಂಗಾಯತರಿಗೆ ವೀರಶೈವ ಎಂಬ ಪದ ಅರ್ಥವಾಗುವುದಿಲ್ಲ. ಅದು ದಕ್ಷಿಣ ಕರ್ನಾಟಕದ ಕೆಲವು ಮಠಾಧೀಶರು ಮತ್ತು ಪ್ರತಿಷ್ಠಿತ ಲಿಂಗಾಯತರು ತಾವೂ ಬ್ರಾಹ್ಮಣರೆಂದು ಅಥವಾ ಅವರಿಗಿಂತ ಕಡಿಮೆಯಲ್ಲವೆಂದು ತೋರಿಸಿ ಕೊಳ್ಳಲು 1930–40ರ ದಶಕಗಳಲ್ಲಿ ಮಾಡಿದ ಪ್ರಯತ್ನವಷ್ಟೆ.

ನೂರು ವರ್ಷಗಳಿಂದೀಚೆಗೆ ಕೆಲವು ಲಿಂಗಾಯತ ಸ್ವಾಮಿಗಳು ಸಂಸ್ಕೃತ ಶಾಲೆಗಳನ್ನು ತೆರೆದರು. ಆ ಮೂಲಕ ಹಿಂದೂ ಪ್ರಭಾವವು ಲಿಂಗಾಯತದೊಳಗೆ ನುಸುಳುವಂತೆ ಮಾಡಿದ್ದಾರೆ. ಕಾಶಿಗೆ ಹೋಗಿ ಹಿಂದೂ ಧಾರ್ಮಿಕ ಗ್ರಂಥ ಕಲಿಯತೊಡಗಿದರು. 'ವೇದಮೂರ್ತಿ', 'ವೇದಬ್ರಹ್ಮ', 'ಷಟ್‌ಸ್ಥಲ ಬ್ರಹ್ಮ' ಇತ್ಯಾದಿ ಬಿರುದುಗಳನ್ನು ತಮ್ಮ ಹೆಸರಿಗೆ ಅಂಟಿಸಿಕೊಳ್ಳುತ್ತಿದ್ದಾರೆ. ಅವರೇ ವೀರಶೈವ ಧರ್ಮವು ಹಿಂದೂ ಧರ್ಮದ ಭಾಗವೆಂದು ಹೇಳುತ್ತಾ ವೇದ ಆಗಮ ಉಪನಿಷತ್ತುಗಳ ಪಾರಮ್ಯ ಒಪ್ಪಿಕೊಳ್ಳುವವರು. ಅವರೇ ಬಸವ ಸ್ಥಾಪಿತ ಧರ್ಮವನ್ನು ತಾವೇ ಸ್ಥಾಪಿಸಿದ್ದೇವೆಂದು ಹೇಳಿಕೊಳ್ಳುತ್ತಾ ಅದಕ್ಕೆ ಆಧಾರವೆಂಬಂತೆ 'ಸಿದ್ಧಾಂತ ಶಿಖಾಮಣಿ'ಯೆಂಬ ನಿರಾಧಾರಿತ

ಇತ್ತೀಚಿನ ಗ್ರಂಥವನ್ನು ಲಿಂಗಾಯತಕ್ಕೆ ಅನ್ವಯಿಸುವ ಪ್ರಯತ್ನದಲ್ಲಿರುವವರು. ಡಾ॥ ಚಿದಾನಂದ ಮೂರ್ತಿಗಳು ಅವರ ಓರ್ವ ಪ್ರಶ್ನಾರ್ಹ ನಾಯಕರು. ಸಿದ್ಧಾಂತ ಶಿಖಾಮಣಿಯು 14ನೇ ಶತಮಾನದ ಕೃತಿಯೆಂದು ಅವರೇ ಸಂಶೋಧನಾತ್ಮಕವಾಗಿ ಆಗ ಬರೆದು ಈಗ ಅದು ತಪ್ಪು ಎಂದು ವಾದಿಸುವುದು ಅವರ ಬುದ್ಧಿವಂತಿಕೆಯ ಲಕ್ಷಣ!

ಬಸವ ಯುಗದ ಶರಣರ ವಿಚಾರಗಳಿಗೆ ಮಾರು ಹೋಗಿ ಲಿಂಗಾಯತಕ್ಕೆ ಬಂದ ಆಂಧ್ರ ಪ್ರದೇಶದ ಕೆಲ ಅರಾಧ್ಯ ಬ್ರಾಹ್ಮಣರು ವಿಜಯನಗರದ ಸಂಗಮ ವಂಶದ ಆಡಳಿತದಲ್ಲಿ ಬಲಾಢ್ಯರಾದರು. ತಮ್ಮ ಮೂಲಬ್ರಾಹ್ಮಣ್ಯವನ್ನು ಬಿಡದೆ, ಲಿಂಗಾಯತವನ್ನೂ ಸಂಪೂರ್ಣವಾಗಿ ಪಾಲಿಸದೆ ಸಾಮಾಜಿಕ ಸಂಧಿಕಾಲದಲ್ಲಿ ಹಿಂದೂ ಧರ್ಮದೊಂದಿಗಿನ ತಿಕ್ಕಾಟ ಬದಿಗಿಟ್ಟು ಅದರೊಂದಿಗೆ ಕೆಲವು ಸಂಧಾನಗಳನ್ನು ಮಾಡಿಕೊಂಡರು. ಆಗ ತಯಾರಾದ 'ಸಿದ್ಧಾಂತ ಶಿಖಾಮಣಿ'ಯು ಡಾ॥ ಮಲ್ಲೇಪುರಂ ಹೇಳಿದಂತೆ ನಿಜವಾಗಿಯೂ ಸಮನ್ವಯ ಗ್ರಂಥ! ತಮ್ಮದೇ ಕೆಲವು ಪೀಠಗಳನ್ನು ಕಟ್ಟಿಕೊಂಡು ಲಿಂಗಾಯತವನ್ನು ಹಾದಿತಪ್ಪಿಸುತ್ತ ಬಂದಿದ್ದಾರೆ. ಲಿಂಗಾಯತವು ಪ್ರಬಲವಾದರೆ ಅವರ ಅಸ್ತಿತ್ವವೇ ಅಳಿದುಹೋಗುತ್ತದೆಯೆಂಬ ಅಳುಕು ಅವರನ್ನು ಧೃತಿಗೆಡಿಸಿದೆ. ಲಿಂಗಾಯತವು ಸ್ವತಂತ್ರ ಧರ್ಮವೆಂದು ಪರಿಗಣನೆಗೆ ಅವರು ವಿರೋಧವನ್ನು ಒಡ್ಡೇಒಡ್ಡುತ್ತಾರೆ. ಅವರ ಕುತಂತ್ರ, ಢೋಂಗಿತನವನ್ನೂ ಮೀರಿ ನಿಲ್ಲುವ ಶಕ್ತಿ ಅಖಿಲ ಬಸವ ಸಮಿತಿಗೆ ಅಥವಾ ಇನ್ನಾವುದೇ ಲಿಂಗಾಯತ ಸಂಘಟನೆಗೆ ಇದೆಯೇ ? ಮುಖ್ಯ ಮಂತ್ರಿಗಳು ನೀಡಿದ ಭರವಸೆಯನ್ನು ಲಿಂಗಾಯತರು ಉಪಯೋಗಿಸುವರೇ ಅಥವಾ ಅಂತರಿಕ ತಿಕ್ಕಾಟದಿಂದ ವಿಫಲ ಗೊಳಿಸುವರೇ ಎಂಬುದನ್ನು ಕಾಯ್ದು ನೋಡಬೇಕಿದೆ. ****

ಗುರುವಾಣಿ

" ಶ್ರೀ ಮಹಾಮಹಿಮನೆ ಸೋಮಶೇಖರ ಗುರುವೆ
ಕಾಮಿತ ಫಲವ ಕೊಡು ಕಂಡಾ । ಎನ್ನ ಹೃ
ದ್ಧಾಮದೊಳ್ ನಿಂದು ಮೆರೆ ಕಂಡಾ ॥

ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ಎಂಬ ಶ್ಲೋಕದಂತೆ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣೀಕರ್ತನಾದ ದೇವನ ಶಕ್ತಿಯನ್ನು ಪಡೆದುಕೊಂಡು ಈ ಭೂಮಿಯ ಮೇಲೆ ಮಾನವ ಆಕಾರದಲ್ಲಿ ಸೋಮಶೇಖರ ಅಂದರೆ ಚಂದ್ರನನ್ನು ಮಸ್ತಕದ ಮೇಲೆ ಧರಿಸಿಕೊಂಡಂಥ ಯೋಗಿ ಶಿವನಂತೆ, ಶಾಂತಿ ಕಳೆಯನು ಹೊಂದಿದಂತೆ ಆಧ್ಯಾತ್ಮ ಜ್ಞಾನವನ್ನು ಹೊತ್ತು ನಡೆದಾಡುವ ದೇವಗುರುವೆ ನಾನು ಬಯಸಿದ ಯೋಗದಿಂದ ಪಡೆವ ಫಲಗಳನ್ನು ಅನುಗ್ರಹಿಸು ಎಂದು ಸದಾ ಎನ್ನ ಹೃದಯ ಮಂದಿರದಲ್ಲಿ ನೆಲೆಸಿ ವಿರಾಜಿಸು ಎಂದು ಬೇಡಿಕೊಂಡಿದ್ದಾರೆ ಮಹಾದೇವಿ ಅಕ್ಕನವರು.

ಪ್ರವಚನ ಪಿತಾಮಹ

– ಸಚ್ಚಿದಾನಂದ ಚಟ್ನಳ್ಳಿ

ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು, ಬಸವ ತತ್ತ್ವವನ್ನು ಇಳೆಯಲ್ಲಿ ಬೆಳಗಲು ಬಂದ ಬಸವ ಭಾನುವಿನ ದಿವ್ಯ ಕಿರಣ, ಬಸವ ಧರ್ಮದ ರಾಯಭಾರಿ, ಬಸವ ಯುಗ ನಿರ್ಮಾಪಕರು, ಮಹಾನ್ ತ್ಯಾಗಿಗಳು ತಪಸ್ವಿಗಳು, ಜಂಗಮತ್ವಕ್ಕೆ ಜೀವ ಕೊಟ್ಟ ನಿಜ ಜಂಗಮರು. ಬಸವ ಧರ್ಮದ ವೀರ ಸೇನಾನಿ, ಧರ್ಮಕ್ರಾಂತಿಯ ಧೀರಯೋಗಿ, ಮಹಿಳಾ ಜಗದ್ಗುರು ಪೀಠ ಸಂಸ್ಥಾಪಕರು, ಬಸವ ಧರ್ಮಪೀಠದ ನಿರ್ಮಾತೃಗಳು, ವಿಶ್ವಕಲ್ಯಾಣ ಮಿಷನ್‌ನ ಜನಕರು, ಮಾತೃ ಹೃದಯಿಗಳು, ಶ್ರೇಷ್ಠ ಸಾಹಿತಿಗಳು, ರಾಷ್ಟ್ರೀಯ ಬಸವದಳದ ಸಂಘಟಕರು, ಅಭಿನವ ವಿವೇಕಾನಂದರು, ಎಲ್ಲಕ್ಕೂ ಮಿಗಿಲಾಗಿ ವಿಶ್ವಧರ್ಮ ಪ್ರವಚನಕಾರರು. ಅಷ್ಟೇ ಅಲ್ಲ ವಿಶ್ವಧರ್ಮ ಪ್ರವಚನಕಾರರ ನಿರ್ಮಾಪಕರು.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗುಂಟ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿರ್ದಿತ್ತಯ್ಯಾ ಶಿವನ ಪ್ರಕಾಶ
ಆ ಬೆಳಗಿನೊಳಗೊಪ್ಪುತ್ತಿರ್ದರಯ್ಯಾ ಅಸಂಖ್ಯಾತ ಶರಣ ಪ್ರಮಥ ಗಣಂಗಳು
ಶಿವಭಕ್ತನಿರ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ
ಶಿವಭಕ್ತನಿರ್ದ ದೇಶ ಪರಮ ಪಾವನವೆಂಬುದು ಹುಸಿಯೇ
ನಮ್ಮ ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯ ಗುರು
ಸಂಗನ ಬಸವಣ್ಣನ ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

ಅಂದಿನ ಕಾಲದಲ್ಲಿ ಬಸವಣ್ಣನವರು ಎಂಥಾ ಒಂದು ಅದ್ಭುತವಾದ ದೈವೀ ಸಮಾಜವನ್ನು ನಿರ್ಮಾಣ ಮಾಡಿದರು ಎನ್ನುವುದಕ್ಕೆ ಅಲ್ಲಮ ಪ್ರಭುದೇವರ ಈ ವಚನವು ಜೀವಂತ ಸಾಕ್ಷಿಯಾಗಿದೆ.

ಮರ್ತ್ಯಲೋಕದ ಈ ಕರ್ತಾರನ ಕಮ್ಮಟವನ್ನು ಸ್ವಾರ್ಥಿಯಾದ ಮಾನವನು ವರ್ಣ, ಜಾತಿ, ವರ್ಗ, ಅಂತಸ್ತು ಭೇದಗಳಿಂದ ಅಂದಗೆಡಿಸಿದ್ದನ್ನು ಕಂಡು, ಮನನೊಂದು ಕರ್ತನ ಮೇಲಿದ್ದ ಅಪಾರ ಅನನ್ಯವಾದ ಭಕ್ತಿಯಿಂದ, ಸೃಷ್ಟಿಯ ಬಗೆಗಿದ್ದ ಅಭಿಮಾನದಿಂದ, ಮಾನವ ಕುಲದ ಮೇಲಿನ ಉತ್ಕಟವಾದ ಪ್ರೀತಿಯಿಂದ ಬಸವಣ್ಣನವರು ಸುಧಾರಣೆಯನ್ನು ಕೈಗೊಂಡರು. ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿದರು. ಜಾತಿ ವರ್ಣ ವರ್ಗರಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಿದರು. ಆವರೆಗೂ ಜಗತ್ತು ಕಂಡರಿಯದ ಕೇಳಲರಿಯದ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸಿದರು. ಧರ್ಮಶ್ರೀಯು ಜನಸಾಮಾನ್ಯರ ಮನ ಮನೆಗಳನ್ನು ಪ್ರವೇಶಿಸುವಂತೆ ವಚನ ವಾಙ್ಮಯವನ್ನು ಕೊಟ್ಟರಲ್ಲದೆ, ಅನುಭವ ಮಂಟಪವೆಂಬ ಸಂಸ್ಥೆಯ ಮೂಲಕ ಬಯಸಿ ಬಂದವರಿಗೆಲ್ಲ ದೀಕ್ಷಾ ಸಂಸ್ಕಾರ ನೀಡಿದರು. ಶತ ಶತಮಾನಗಳ ಕಾಲದಿಂದಲೂ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಸಂಖ್ಯಾತರು ಬಸವ ಧರ್ಮದ ಪಾವನ ಜಲದಲ್ಲಿ ಮಿಂದು ಪಾವನರಾದರು. ಆ ಶಿವನ ಪ್ರಕಾಶದಲ್ಲಿ ನಲಿನಲಿದಾಡಿದರು.

ಆದರೆ ನಂತರ ಆದುದೇನು? ಯಾವಾಗ ಕಲ್ಯಾಣ ಕ್ರಾಂತಿಯಾಯಿತೋ ಆವಾಗ ಕಲ್ಯಾಣವೆಂಬ ಪ್ರಣತೆ ಒಡೆದು ಚೂರು ಚೂರಾಯಿತು. ಭಕ್ತಿರಸವೆಂಬ ತೈಲವೂ ಬತ್ತಿಹೋಯಿತು. ಬಸವಣ್ಣನೆಂಬ ಜ್ಯೋತಿ ನಂದಿಹೋಯಿತು. ಆಗ ಅಲ್ಲಿ ಶಿವನ ಪ್ರಕಾಶ ಇಲ್ಲವೇ ಇಲ್ಲ. ಬಸವಣ್ಣನೆಂಬ ಕಲ್ಯಾಣದ ಭಾಗ್ಯರವಿ ಅಸ್ತಂಗತವಾದ ಮೇಲೆ ಪುನಃ ಎಲ್ಲೆಲ್ಲಿಯೂ ಕತ್ತಲೆ ಕವಿಯಿತು, ಅಜ್ಞಾನದ ಕತ್ತಲೆ ಮೌಢ್ಯತೆಯ ಕತ್ತಲೆ!

ಯಾವ ಅನಿಷ್ಟ ಆಚರಣೆಗಳನ್ನು ಬಸವಾದಿ ಪ್ರಮಥರು ಗುಡಿಸಿ ಮುಂಬಾಗಿಲಿನಿಂದ ಹೊರ ಹಾಕಿದ್ದರೋ ಆ ಅನಿಷ್ಟ ಆಚರಣೆಗಳನ್ನು ಅಜ್ಞಾನದ ಕತ್ತಲೆಯಲ್ಲಿ ಜನ ಪುನಃ ಅವುಗಳನ್ನು ಹಿಂಬಾಗಿಲಿನಿಂದ ಒಳಗೆ ಸೇರಿಸಿಕೊಂಡು ಲಿಂಗಾಯತ ಧರ್ಮದ ಆಚಾರ ವಿಚಾರಗಳನ್ನು ಕಲಬೆರಕೆ ಮಾಡಿದರು. ಪುನಃ ಇಲ್ಲಿ ಅಸಮಾನತೆ ಪುರೋಹಿತಶಾಹಿಯ ದಬ್ಬಾಳಿಕೆ ಮಠಾಧಿಕಾರಿಗಳ ವೈಭವ, ಶೋಷಣೆ, ಜಾತೀಯತೆ ಇಂಥ ಒಂದಲ್ಲ ಎರಡಲ್ಲ ಅನೇಕ ಅನಿಷ್ಟಗಳು ಈ ಸಮಾಜಕ್ಕೆ ಮುತ್ತಿಕೊಂಡವು. ಒಂದು ಕಾಲದಲ್ಲಿ ಶರಣ ಸಮಾಜವೇ ಇರಲಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಮೌಢ್ಯತೆಯ ಕತ್ತಲೆ ತುಂಬಿತ್ತು ಈ ಸಮಾಜದಲ್ಲಿ.

ಇಂಥ ಸಂದರ್ಭದಲ್ಲಿ ಪೂಜ್ಯ ಅಪ್ಪಾಜಿಯವರು ಏನು ಮಾಡಿದರು ಎಂದರೆ ಇಡೀ ತಮ್ಮ ಜೀವನವನ್ನು ಬಸವ ತತ್ತ್ವಕ್ಕಾಗಿ ಮುಡುಪಾಗಿಟ್ಟು ತಮ್ಮ ದೇಹವನ್ನೇ ಪ್ರಣತೆಯನ್ನಾಗಿ ಮಾಡಿಕೊಂಡು ತ್ಯಾಗ, ತಪಸ್ಸು, ವೈರಾಗ್ಯವೆಂಬ ತೈಲವನ್ನೆರೆದು ತಮ್ಮ ತತ್ತ್ವ ನಿಷ್ಠೆಯೆಂಬ ಬತ್ತಿಯನ್ನಿಟ್ಟು, ಪ್ರವಚನವೆಂಬ ಜ್ಯೋತಿಯನ್ನು ಮುಟ್ಟಿಸಿದರು. ಆಗ ಪುನಃ ತೊಳಗಿ ಬೆಳಗುತ್ತಿರ್ದಿತಯ್ಯಾ ಬಸವ ಪ್ರಕಾಶ. ಈ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯ ಅಸಂಖ್ಯಾತ ಬಸವ ಭಕ್ತರು! ಅಪ್ಪಾಜಿಯವರು ಪ್ರವಚನ ಮಾಡಿದ ಊರು ಬಸವ ಮಾಯವಾಗಿದೆ ಎನ್ನುವುದು ಹುಸಿಯೇ! ಅಪ್ಪಾಜಿ ಪ್ರವಚನ ಕೇಳಿದ ಜನರು ಪಾವನರಾದರು ಬಸವ ಭಕ್ತರಾದರು ಎನ್ನುವುದು ಹುಸಿಯೇ! ಬಸವಕಂದ ಪರಮ ಗುರು ಲಿಂಗಾನಂದರ ತ್ಯಾಗದಿಂದ ನಾವೆಲ್ಲ ಬದುಕಿದೆವು.

ಬಸವಣ್ಣನವರ ಕಾಲದಲ್ಲಿ ಜನರು ಸತ್ಯದ ಸಾಧಕರು, ಶೋಧಕರೂ ಆಗಿದ್ದರಿಂದ ಧರ್ಮದ ಕಡೆ ಬಂದರು. ಕಲ್ಯಾಣದಲ್ಲಿ ತೊಳಗಿ ಬೆಳಗುತ್ತಿರ್ದ ಆ ಜ್ಯೋತಿಯಿಂದ ತಮ್ಮ ಬಾಳಿನ ಹಣತೆಯನ್ನು ಹೊತ್ತಿಸಿಕೊಂಡು ಭಕ್ತಿವಂತರಾದರು. ಆದರೆ ಅಪ್ಪಾಜಿಯವರು ಪ್ರವಚನ ಮಾಡುವ ಕಾಲದಲ್ಲಿ ಜನರು ಧರ್ಮದ ಕಡೆ ಬರುವಷ್ಟು ಪ್ರಜ್ಞಾವಂತರಿರಲಿಲ್ಲ. ಅದಕ್ಕಾಗಿ ಧರ್ಮವನ್ನೇ ಅವರ ಕಡೆ ಕೊಂಡೊಯ್ಯುವ ಉದ್ದೇಶದಿಂದ ಪೂಜ್ಯ ಅಪ್ಪಾಜಿಯವರು ಯಾವುದೇ ಮಠವನ್ನು ಒಂದು ಪ್ರಣತೆಯಾಗಿ ಮಾಡದೆ, ತಮ್ಮ ದೇಹವನ್ನೇ ಪ್ರಣತೆಯಾಗಿ ಮಾಡಿಕೊಂಡು ಪ್ರವಚನದ ಬೆಳಕನ್ನು ಹಿಡಿದು ಹೊರಟರು ಆಗ ಮತ್ತೆ ಜನರಲ್ಲಿಯ ಅಜ್ಞಾನದ ಕತ್ತಲೆಯಳಿದು ಸುಜ್ಞಾನದ ಬೆಳಕಿನಲ್ಲಿ ಬಾಳುವಂತಾಯಿತು.

ಇನ್ನೊಂದು ವೈಶಿಷ್ಟ್ಯವೇನೆಂದರೆ ಇಂಥ ಪ್ರವಚನ ಜ್ಯೋತಿಯ ಬಸವ ಪ್ರಕಾಶದಲ್ಲಿಯೇ ಪೂಜ್ಯ ಅಪ್ಪಾಜಿಯವರಿಗೆ ಅಮೂಲ್ಯ ರತ್ನವೊಂದು ಚಿನ್ಮೂಲಾದ್ರಿಯ ಚಿನ್ನದ ಗಣಿಯಲ್ಲಿ ದೊರೆಯಿತು. ಬಸವ ಗುರುವಿನ ಕೀರ್ತಿ ಮುಕುಟದಲ್ಲಿ ಬೆರೆತು, ಬಸವ ತತ್ತ್ವವನ್ನು ವಿಶ್ವದಾದ್ಯಂತ ಬೆಳಗಿದ ಆ ಅಮೂಲ್ಯ ರತ್ನವೇ ಪೂಜ್ಯ ಮಹಾಜಗದ್ಗುರು ಮಾತಾಜಿಯವರು.

ಪೂಜ್ಯ ಅಪ್ಪಾಜಿಯವರ ತ್ಯಾಗವು ಅತ್ಯಂತ ಶ್ರೇಷ್ಠವಾದುದು. ಅವರ ಜೀವನದುದ್ದಕ್ಕೂ ಹೋರಾಟವೇ. ಬದುಕಿನ ಪ್ರಥಮ ಹಂತದಲ್ಲಿ ಬಡತನದೊಡನೆ, ಎರಡನೇ ಹಂತದಲ್ಲಿ ಅನ್ಯಾಯದೊಡನೆ, ಮೂರನೇ ಹಂತದಲ್ಲಿ ಸಂಪ್ರದಾಯದೊಡನೆ ಹೋರಾಟ. ಅದರಲ್ಲಿಯೇ ಅವರ ತಪಸ್ಸು ಸಾಧನೆ ಸಿದ್ಧಿ ಎಲ್ಲವೂ.

ಅವರು ಪ್ರವಚನ ಆರಂಭಿಸಿದಾಗ ಈ ಸಮಾಜದ ಚಿತ್ರಣವನ್ನು ತೆಗೆದುಕೊಂಡರೆ ಅವರ ದಿಟ್ಟತನ ಧೈರ್ಯ ತ್ಯಾಗಗಳ ಅರಿವು ನಮಗಾಗಲು ಸಾಧ್ಯವಿದೆ. ಅಂದು ಬಸವಣ್ಣ ಎಂದರೆ ಎತ್ತಲ್ಲ ಅವರೊಬ್ಬ ಮಹಾಪುರುಷ ಎಂದರೆ ಜನ ಹೊಡೆಯುವಷ್ಟು ಅಜ್ಞಾನಿಗಳಾಗಿದ್ದರು. ಆದರೆ ಇಂದು ಬಸವಣ್ಣ ಎಂದರೆ ಎತ್ತು ಎಂದು ಹೇಳಿದರೆ ಜನ ಹೊಡೆಯುತ್ತಾರೆ. ನಿಜವಾಗಿಯೂ ಯುಗ ಪರಿವರ್ತಕರು ಪೂಜ್ಯ ಸ್ವಾಮೀಜಿಯವರು. ಆ ಕಾಲದಲ್ಲಿ ಈ ಸಮಾಜದಲ್ಲಿ ಸತ್ಯ ಪ್ರತಿಪಾದನೆ ಮಾಡುವುದೆಂದರೆ ಹುಲಿಯ ಮೀಸೆ ಹಿಡಿದು ಉಯ್ಯಾಲೆಯಾಡಿದಂತೆ, ಹಾವಿನ ಹೆಡೆಯ ಕೊಂಡು ಕನ್ನೆಯ ತುರಿಸಿ ಕೊಂಡಂತೆ. ಸತ್ಯವನ್ನು ಪ್ರತಿಪಾದನೆ ಮಾಡಲು ಹೊರಟ ಸಾಕ್ರೆಟಿಸನಿಗೆ ವಿಷ ಪ್ರಾಶನ, ಗೆಲಿಲಿಯೋಗೆ ಗಲ್ಲು ಶಿಕ್ಷೆ , ಬಸವಣ್ಣನವರಿಗೆ ಗಡಿಪಾರು ಶಿಕ್ಷೆ, ಗಾಂಧೀಜಿಯವರಿಗೆ ಗುಂಡಿನೇಟು! ಇದನ್ನೆಲ್ಲಾ ಅರಿತೂ ಕೂಡ ಅದ್ಭುತ ಕಾರ್ಯಕ್ಕೆ ಕೈಹಾಕಿದ ಧೀಮಂತ ಗುರು ಪೂಜ್ಯ ಲಿಂಗಾನಂದ ಸ್ವಾಮೀಜಿಯವರು.

ಪುರಾಣಗಳಲ್ಲಿ ನಾವೊಂದು ಕಥೆಯನ್ನು ಕೇಳುತ್ತೇವೆ, ಸಮುದ್ರ ಮಂಥನ ಮಾಡುವ ಕಾಲದಲ್ಲಿ ಕೆಲವೊಂದು ಏನೇನೋ ಅಮೂಲ್ಯ ವಸ್ತುಗಳು ಬಂದವು. ಅವುಗಳನ್ನು ನಾ ಮುಂದೆ ತಾ ಮುಂದೆ ಎಂದು ಅನೇಕರು ತೆಗೆದುಕೊಂಡರಂತೆ. ಆಮೇಲೆ ಹಾಲಾಹಲ ಎನ್ನುವ ವಿಷವೂ ಕೂಡ ಹೊರ ಬಂತು. ಅದನ್ನು ಯಾರೂ ತೆಗೆದುಕೊಳ್ಳಲಾಗಲಿಲ್ಲ ಹಾಗೆ ಬಿಟ್ಟರೆ ಈ ಜಗತ್ತೂ ಕೂಡ ಉಳಿಯುತ್ತಿರಲಿಲ್ಲವಂತೆ. ಆಗ ಕರುಣಾಮಯಿಯಾದ ಶಿವನು ಬಂದು ಆ ವಿಷವನ್ನು ಕುಡಿದು ಜಗತ್ತನ್ನು ಕಾಪಾಡಿದ. ವಿಷ ಕುಡಿದುದರಿಂದ ಅವನ ಕಂಠವು ನೀಲಿ ಬಣ್ಣವಾಯಿತು. ಅದಕ್ಕಾಗಿ ಅಂದಿನಿಂದ ಅವನಿಗೆ ನೀಲಕಂಠ ಎಂಬ ಹೆಸರೂ ಬಂದಿದೆಯಂತೆ. ಆದರೆ ಇಷ್ಟಂತೂ ನಿಜ ಯಾವ ಸಮಾಜದ ಜನರ ಮನಗಳೆಂಬ ಹರವಿಯಲ್ಲಿ ಶತ ಶತಮಾನಗಳ ಕಾಲದಿಂದಲೂ ಸಂಪ್ರದಾಯದ, ಮೌಢ್ಯತೆಯ ಅಜ್ಞಾನದ ಜಿಡ್ಡು ಹೊಲಸು ತುಂಬಿತ್ತೊ, ಅದನ್ನು ಬಸವ ತತ್ತ್ವವೆಂಬ ಕೊಳೆನಾಶಕದಿಂದ ತೊಳೆದು ಅಲ್ಲಿ ಬಸವ ಭಕ್ತಿಯೆಂಬ ಕೆನೆ, ಮೊಸರನ್ನು ಹಾಕಿ ಪ್ರವಚನವೆಂಬ ಕಡೆಗೋಲಿನಿಂದ ಸದಾಚಾರ, ಶಿವಾಚಾರವೆಂಬ ಹಗ್ಗದಿಂದ ಅನುಭಾವ ಮಂಥನ ಮಾಡಿ ಬಸವ ತತ್ತ್ವದ ನವನೀತವನ್ನು ಕೊಡುವಾಗ ಅನೇಕ ಸಂಪ್ರದಾಯವಾದಿಗಳು, ಮತಾಂಧರು, ದುಷ್ಟರು ನೀಡಿದ ಅನಂತ ಕಷ್ಟಕಾರ್ಪಣ್ಯ, ಕಿರುಕುಳ, ಅಡ್ಡಿ ಆತಂಕವೆಂಬ ವಿಷವನ್ನು ಕುಡಿದು ಜನ ಬದುಕಬೇಕು, ಜಗ ಬದುಕಬೇಕು ಎಂದು ವಚನ ನವನೀತವನ್ನಿತ್ತು, ಬಸವ ತತ್ತ್ವಾಮೃತವನ್ನಿತ್ತು ನಮ್ಮನೆಲ್ಲ ರಕ್ಷಿಸಿದ ನಿಜವಾದ ನೀಲಕಂಠ ಮಹಾಗುರು ಅಪ್ಪಾಜಿಯವರು.

ಪೂಜ್ಯ ಸ್ವಾಮೀಜಿಯವರು ಪ್ರವಚನ ಪಿತಾಮಹರು, ಬಿಜಾಪುರ ಜಿಲ್ಲೆಯು ಕೇವಲ ಸ್ಥಾವರವಾದ ಒಂದು ಗೋಲಗುಮ್ಮಟವನ್ನು ಕಾಣಿಕೆಯಾಗಿ ಕೊಡದೇ ಜಂಗಮವಾಗಿರುವ ಇನ್ನೂ ಮೂರು ಅಮೂಲ್ಯ ಗುಮ್ಮಟಗಳನ್ನೂ ಜಗತ್ತಿಗೆ ನೀಡಿದೆ. 1. ಧರ್ಮಗುಮ್ಮಟ ಗುರುಬಸವಣ್ಣನವರು. 2. ವಚನ ಗುಮ್ಮಟ ಫ.ಗು. ಹಳಕಟ್ಟಿಯವರು. 3. ಪ್ರವಚನ ಗುಮ್ಮಟ ಪೂಜ್ಯ ಲಿಂಗಾನಂದ ಸ್ವಾಮಿಗಳು.

ಗೋಲಗುಮ್ಮಟದಲ್ಲಿ ಒಮ್ಮೆ ಧ್ವನಿಸಿದ ಧ್ವನಿ ಏಳುಬಾರಿ ಪ್ರತಿಧ್ವನಿಸುತ್ತದೆ. ಆದರೆ ಪ್ರವಚನ ಗುಮ್ಮಟದಲ್ಲಿ ಒಮ್ಮೆ ಧ್ವನಿಸಿದ 'ಬಸವ' ಎಂಬ ಧ್ವನಿ, ಲಕ್ಷ ಲಕ್ಷ ಬಸವ ಭಕ್ತರ ಹೃದಯದಲ್ಲಿ ಪ್ರತಿಧ್ವನಿಸಿದೆ. ಪ್ರವಚನ ಎನ್ನುವ ಒಂದು ಹೊಸ ಶೈಲಿಯನ್ನು ಹುಟ್ಟು ಹಾಕಿದವರೇ ಸ್ವಾಮೀಜಿಯವರು. ಅಲ್ಲಿಯವರಿಗೆ ಕೇವಲ ಪುರಾಣ ಕೀರ್ತನೆಗಳು ಮಾತ್ರ ನಡೆಯುತ್ತಿದ್ದವು, ವಚನ ಸಾಹಿತ್ಯದ ಮೇಲೆ ಅದು ತಿಂಗಳುಗಟ್ಟಲೆ ಪ್ರವಚನ ಮಾಡುವುದನ್ನು ರೂಢಿಸಿದ್ದಾರೆ. ಇನ್ನೊಂದು ರೀತಿಯಿಂದ ಹೇಳಬೇಕೆಂದರೆ, ಧರ್ಮಪಿತರು ಅಂದು ಅನುಭವ ಮಂಟಪ ಎಂಬ ಕಣದಲ್ಲಿ ರಾಶಿ ಮಾಡಿಕೊಟ್ಟ ವಚನ ಸಾಹಿತ್ಯ ಕಲ್ಯಾಣ ಕ್ರಾಂತಿಯ ನಂತರ ಇತಿಹಾಸವೆಂಬ ಹಗೆಹದಲ್ಲಿ ಇಡಲ್ಪಟ್ಟಿತ್ತು. ಇಂತಹ ಸಂದರ್ಭದಲ್ಲಿ ಬಹಳ ಕಷ್ಟಪಟ್ಟು ಪರಿಶ್ರಮದಿಂದ ಶರಣ ಫ.ಗು.ಹಳಕಟ್ಟಿಯವರು ಮನೆ ಮನೆಗೆ ಹೋಗಿ ವಚನ ಸಾಹಿತ್ಯದ ತಾಡ ಓಲೆಗಳನ್ನು ಸಂಗ್ರಹಿಸಿದರು. ಅವುಗಳ ಪ್ರಕಟಣೆಗಾಗಿ ತಮ್ಮ ಮನೆಯನ್ನೇ ಮಾರಿ ಪ್ರಿಂಟಿಂಗ್ ಪ್ರೆಸ್ ಹಾಕಿ ವಚನಗಳನ್ನು ಪುಸ್ತಕದ ರೂಪದಲ್ಲಿ ಪ್ರಕಟಿಸಿದ ತ್ಯಾಗಿ ವಚನ ಪಿತಾಮಹ ಫ.ಗು. ಹಳಕಟ್ಟಿಯವರು.

ಇಂಥ ಪ್ರಕಟಣೆಗೊಂಡ ವಚನ ಸಾಹಿತ್ಯ ಕೇವಲ ಪುಸ್ತಕಗಳಲ್ಲಿ ಉಳಿದರೆ ಸಾಲದು ಅದು ಜನ ಮನಗಳ ಬಾಗಿಲಿಗೆ ಮುಟ್ಟಬೇಕು ಎಂದು ತಿಳಿದು ಪ್ರವಚನವೆಂಬ ಕೂರಗಿಯ ಮುಖಾಂತರ ಕರ್ನಾಟಕದಾದ್ಯಂತ ಅಷ್ಟೇ ಅಲ್ಲದೆ ಹೊರ ರಾಜ್ಯಗಳಲ್ಲಿಯೂ ಬಿತ್ತಿ ಬಸವ ತತ್ತ್ವದ ಅಮೋಘ ಬೆಳೆಯನ್ನು ತೆಗೆದ ಆಧ್ಯಾತ್ಮ ಕೃಷಿಕ ಪೂಜ್ಯ ಸ್ವಾಮೀಜಿಯವರು.

ಬಸವಾದಿ ಪ್ರಮಥರ ವಚನ ನಂದನ ವನದೊಳಗೆ ವಿಹರಿಸಿ ವಚನವಾಙ್ಮಯ ರಸವನ್ನೀಂಟಿ ಬಸವ ಭಕ್ತಿಯ ಕೂಹೂ ಕೂಹೂ ರಾಗ ಹಾಡಿ ಅಸಂಖ್ಯಾತರ ಹೃನ್ಮನಗಳನ್ನು ತಣಿಸಿದ ದೇವ ಕೋಗಿಲೆಯಾದರು.

ಅವರ ಕಂಚಿನ ಕಂಠದಿಂದ ಕನ್ನಡ ಸಾಹಿತ್ಯದ ಕಿರೀಟವಾದ ವಚನ ಸಾಹಿತ್ಯದ ನುಡಿಗಳು ಹೊರ ಹೊಮ್ಮುತ್ತಿದ್ದರೆ ಅಲ್ಲಿ ಕನ್ನಡ ಸರಸ್ವತಿ ನಾಟ್ಯವಾಡಿದಂತೆ ಭಾಸವಾಗುತ್ತದೆ. ಆ ಕಂಠವೇ ಒಂದು ಅದ್ಭುತ ಸಿಂಹಗರ್ಜನೆ ಇದ್ದ ಹಾಗೆ. ಎಂಥವರನ್ನೂ ಮಂತ್ರ ಮುಗ್ಧವಾಗಿಸುವ ಆ ಕಂಠವನ್ನು ಕ್ಯಾಸೆಟ್‌ಗಳಲ್ಲಿ ಸೆರೆ ಹಿಡಿದು ಬಹು ದೊಡ್ಡ ಉಪಕಾರವನ್ನು ಪೂಜ್ಯ ಮಾತಾಜಿಯವರು ಮಾಡಿದ್ದಾರೆ.

ತತ್ತ್ವ ಪ್ರಸಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ಶ್ರೀಗಂಧದಂಥ ತ್ಯಾಗ ಮಾಡಿದ್ದಾರೆ. ಶ್ರೀಗಂಧದ ಮರವು ತನ್ನ ಆಶ್ರಯದಲ್ಲಿ ಇರುವ ಮರಗಳಿಗೂ ಕೂಡ ಸುವಾಸನೆ ಬರುವಂತೆ ಮಾಡುತ್ತದೆ. ಕಡಿದು ತೇಯ್ದರೆ ಗಂಧವನ್ನು ನೀಡುತ್ತದೆ, ಸುಟ್ಟರೆ ಸುವಾಸನೆಯನ್ನು ಬೀರುತ್ತದೆ, ಕೆತ್ತಿದರೆ ಮೂರ್ತಿಯಾಗುತ್ತದೆ.

ಅದೇ ರೀತಿ ಸ್ವಾಮೀಜಿಯವರು ತಮ್ಮ ಆಶ್ರಯಕ್ಕೆ ಬಂದ ಪ್ರತಿಯೊಬ್ಬರಲ್ಲಿಯೂ ಬಸವ ಭಕ್ತಿಯ, ತತ್ತ್ವ ನಿಷ್ಠೆಯ ಪರಿಮಳವನ್ನು ತುಂಬಿದ್ದಾರೆ. ಧರ್ಮ ಪ್ರಸಾರಕ್ಕಾಗಿ ತಮ್ಮನ್ನು ತಾವು ಸವೆಸಿಕೊಂಡಿದ್ದಾರೆ. ಅನೇಕ ಕಷ್ಟಗಳ ಅಗ್ನಿಯಲ್ಲಿ ಬೆಂದು ಬಸವ ತತ್ತ್ವದ ಸುವಾಸನೆಯನ್ನು ಎಲ್ಲೆಲ್ಲಿಯೂ ಬೀರಿದ್ದಾರೆ. ಕೊನೆಗೆ ಬಸವ ಮಹಾಗುರುವೆಂಬ ಶಿಲ್ಪಿಯ ಕೈಗೆ ಸಿಕ್ಕಿ ಆದರ್ಶ ಮೂರ್ತಿಯಾಗಿದ್ದಾರೆ. ಎಂತಹದೇ ಸಂದರ್ಭದಲ್ಲಿ ಎದೆ ಗುಂದಲಿಲ್ಲ ಸತ್ಯವನ್ನು ಹೇಳಲು ಯಾರಿಗೂ ಹೆದರಲಿಲ್ಲ.

ಜಂಗಮತ್ವಕ್ಕೆ ಜೀವ ತಂದು ಕೊಟ್ಟು ಕಾವಿಬಟ್ಟೆಗೆ ಕೀರ್ತಿಯನ್ನು ತಂದಿದ್ದಾರೆ. ಪೂಜ್ಯರ ಸಾಹಿತ್ಯ

(ಪುಟ 19ರಲ್ಲಿ ಮುಂದುವರೆದಿದೆ..)










ಲಿಂಗಾಯತ ಧರ್ಮ ಸ್ವತಂತ್ರ ಧರ್ಮ















ರಚನೆಯೂ ಕೂಡ ಅಷ್ಟೇ ಅದ್ಭುತವಾಗಿದೆ. ಇಂದು ಸುಯಿಧಾನ ಸುಗ್ರಂಥ ಮಾಲೆಯು ಸುಮಾರು 146 ಗ್ರಂಥ ಪುಷ್ಪಗಳನ್ನು ಅರಳಿಸಿದೆ. ಇದು ಸ್ವಾಮೀಜಿಯವರು ನೆಟ್ಟ ಬಳ್ಳಿ. ಇವರು ಬರೆದಿರುವ ಒಂದೊಂದು ಕೃತಿಯೂ ಕೂಡ ಉದ್ದಾಮ ಕೃತಿಯೇ. 'ದೇವರು' ಎನ್ನುವಂಥ ಕೃತಿ ಬಹುಶಃ ಜಗತ್ತಿನ ಇನ್ನಾವುದೇ ಭಾಷೆಯಲ್ಲಿರಲಿಕ್ಕಿಲ್ಲ. ದೇವರ ಸ್ವಯಂಭು ಕಲ್ಪನೆಯನ್ನು ದೇವರ ಸ್ವರೂಪವನ್ನು ಅದರಲ್ಲಿ ಬಿಡಿ ಬಿಡಿಯಾಗಿ ಚಿತ್ರಿಸಿದ್ದಾರೆ.

ಬಸವಣ್ಣನವರ ವಚನ ವಾರಿಧಿಯಲ್ಲಿ ಮಿಂದ ಪೂಜ್ಯ ಅಪ್ಪಾಜಿಯವರ ಶರೀರದಲ್ಲಿ ಬಸವಣ್ಣನವರ ಕಾರಣ ಶರೀರ ವಾಸವಾಗಿದ್ದು ಇಂಥ ಅದ್ಭುತ ಕಾರ್ಯಗಳನ್ನು ಮಾಡಿಸಿದೆಯೇನೊ ಎನಿಸುತ್ತದೆ. ತಮ್ಮ ನುಡಿಯೇ ಬಸವಣ್ಣನ ನುಡಿಯಾಗಿ, ಬಸವಣ್ಣನವರ ನುಡಿಗೆ ತಾವು ತುಟಿಯಾಗಿ, ಬಸವಣ್ಣನವರ ನೋಟಕ್ಕೆ ತಾವು ಕಣ್ಣಾಗಿ, ಬಸವಣ್ಣನವರ ಕಾರ್ಯಕ್ಕೆ ತಾವು ಕಾರಣಕರ್ತರಾಗಿದ್ದರು.

ಈ ಮಾತಿಗೆ ಪ್ರತ್ಯಕ್ಷ ಸಾಕ್ಷಿ ಎಂದರೆ, ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟ ಜಗನ್ಮಾತ ಅಕ್ಕಮಹಾದೇವಿ ಅನುಭಾವ ಪೀಠ. ಈ ಪೀಠ ಸ್ಥಾಪನೆಯು ಎಲ್ಲವೂ ಆಕಸ್ಮಿಕವಾಗಿಯೇ ನಡೆದು ಹೋಯಿತು.

ಅಂದು ಗುರುಬಸವಣ್ಣನವರ ಅನೇಕ ಹೃದ್ಗತ ಕನಸುಗಳು ಸಂಕಲ್ಪಗಳು ಅನೀರಿಕ್ಷಿತ ಕಲ್ಯಾಣ ಕ್ರಾಂತಿಯಿಂದ ನನಸಾಗದೇ ಈಡೇರದೆ ಹೋದವು ಅವುಗಳಲ್ಲಿ ಅಕ್ಕಮಹಾದೇವಿ ಅನುಭಾವ ಪೀಠವು ಒಂದು ಎಂದರೆ ತಪ್ಪಾಗಲಾರದು.

ಸ್ತ್ರೀ ಸಮಾನತೆಯನ್ನು ಸಾರಿದ್ದ ಬಸವಣ್ಣನವರು, ಅಂದು ಪುರುಷರಿಗೆ ಅನುಭಾವ ಮಂಟಪದಲ್ಲಿ ಶೂನ್ಯಪೀಠವನ್ನು ಮಾಡಿ, ಪ್ರಥಮ ಅಧಿಕಾರಿಯಾಗಿ ಅಲ್ಲಮ ಪ್ರಭುದೇವರನ್ನು ಮಾಡಿದರು. ಬಹುಶಃ ಬಸವಣ್ಣನವರು ಅಂದು ಮಹಿಳಾ ಪೀಠವೊಂದನ್ನು ಮಾಡುವ ಸಂಕಲ್ಪ ಹೊಂದಿರಬೇಕು ಅಥವಾ ಅದೇ ಪೀಠಕ್ಕೆ ಎರಡನೇ ಅಧಿಕಾರಿಣಿಯಾಗಿ ಅಕ್ಕಮಹಾದೇವಿ ತಾಯಿಯವರನ್ನು ನೇಮಿಸುವ ಸಂಕಲ್ಪವಾದರೂ ಹೊಂದಿರಲೇಬೇಕು. ಆದರೆ ಬಹಳ ಬೇಗ ಅಕ್ಕ ಕಲ್ಯಾಣದಿಂದ ಕದಳಿ ವನಕ್ಕೆ ನಿರ್ಗಮಿಸಿದರಿಂದ ಆ ಸಂಕಲ್ಪ ನೆರವೇರಲಿಲ್ಲ.

ಹೀಗೆ ಆಕಸ್ಮಿಕವಾಗಿ ಪೂಜ್ಯ ಮಾತಾಜಿಯವರು ಬಸವ ಕಲ್ಯಾಣದಲ್ಲಿ ಭಾಷಣ ಮಾಡುವಾಗ ಬಸವಣ್ಣನವರ ಸಂಕಲ್ಪವನ್ನು ಗ್ರಹಿಸಿದ ಅವರ ಹೃದಯ, ಮಹಿಳಾ ಗುರು ಪೀಠವೊಂದರ ಅವಶ್ಯಕತೆ ಇದೆ ಎಂದು ನುಡಿಸಿತು. ಆಗಲೇ ಕೆಲವರು ಸಾಧ್ಯವಿಲ್ಲ ಹೆಣ್ಣು ಮಕ್ಕಳು ಹೇಗೆ ಗುರುವಾಗಲಿಕ್ಕೆ ಬರುತ್ತದೆ ಎಂದು ವಿರೋಧಿಸಿದ್ದಾಗ ಹೇಗೆ ಸಾಧ್ಯವಿಲ್ಲ ಮಾಡಿ ತೋರಿಸುತ್ತೇನೆ ಎಂದು ಪೂಜ್ಯ ಸ್ವಾಮೀಜಿಯವರು ಪ್ರತಿಜ್ಞೆಯ ನುಡಿಗಳಾಡಿದರಂತೆ. ಇದಾದ ಕೇವಲ ಒಂದುವರೆ ವರ್ಷದಲ್ಲಿಯೇ ಪೀಠಸ್ಥಾಪನೆ ಆಗಿಯೇ ಬಿಟ್ಟಿತು.

ಪೂಜ್ಯ ಅಪ್ಪಾಜಿಯವರ ನಿಷ್ಕಲ್ಮಷವಾದ ಮತ್ಸರ ರಹಿತವಾದ ಹೃದಯವು ಹಾಲಿನಷ್ಟು ಶುಭ್ರ. ಬಹುಶಃ ಯಾವ ಗುರುವು ಕೂಡ ತಮ್ಮ ಶಿಷ್ಯರ ಬಗ್ಗೆ 'ಚಿನ್ಮೂಲಾದ್ರಿಯ ಚಿತ್ಕಳೆ'ಯಂಥ ಗ್ರಂಥ ಬರೆದಿರಲಿಕ್ಕಿಲ್ಲ. ಜಗನ್ಮಾತಾ ಅಕ್ಕಮಹಾದೇವಿ ಪೀಠದ ದ್ವಾದಶ ಪೀಠಾರೋಹಣ ಸಂದರ್ಭದಲ್ಲಿ ಮಾತಾಜಿಯವರ ಬಗ್ಗೆ ಹೀಗೆ ಹೇಳಿದ್ದಾರೆ:

"ಗುರುವೆಂಬ ಶಿಲ್ಪಿಯಾಗಿ ನಾನೊಂದು ಕನಸು ಕಟ್ಟಿದೆ ಪ್ರತಿಭಾವಂತ ಧರ್ಮ ಪ್ರಚಾರಕರನ್ನು ಬಸವ ತಂದೆಗಾಗಿ ಬಾಳನ್ನು ಮುಡುಪಿಡುವ ತ್ಯಾಗಿಗಳನ್ನು ಬಸವಣ್ಣನವರ ಕನಸನ್ನು ನನಸು ಮಾಡಬಲ್ಲ

ತತ್ತ್ವ ನಿಷ್ಠರನ್ನು ರೂಪಿಸಬೇಕೆಂಬ ಆಕಾಂಕ್ಷೆ ತಳೆದಿದ್ದೆ. ಮಾತಾಜಿಯೆಂಬ ದೇವ ಶಿಲೆ ಕಂಡಾಗ ಈ ಆಶೋತ್ತರಗಳು ಸಿದ್ಧಿಸಬಹುದೇನೊ ಎಂದು ಸಂಕಲ್ಪಿಸಿದೆ. ಮೂರ್ತಿ ನನ್ನ ಕಲ್ಪನೆಗೆ ತಕ್ಕಂತೆ ಸಿದ್ಧವಾಯಿತು. ಕಲ್ಪನೆಗೂ ಅತೀತವಾಗಿ ರೂಪುದಾಳಿತು. ಶಿಲ್ಪಿಯು ಅನೇಕ ವಿಗ್ರಹಗಳನ್ನು ಕೆತ್ತಿದರೂ ಕೆಲವು ಮಾತ್ರ ಅವನನ್ನು ಕೀರ್ತಿವಂತನನ್ನಾಗಿಸುತ್ತವೆ. ಅಂತಾಯಿತು ಮಾತಾಜಿಯವರ ಸಾಧನೆ''.

ಅಂದು ಪೂಜ್ಯರು ವಿಶ್ವ ಕಲ್ಯಾಣ ಮಿಷನ್ ಎನ್ನುವ ಸಸಿಯನ್ನು ನೆಟ್ಟಿದ್ದರು. ಅದು ಇಂದು ಹೆಮ್ಮರವಾಗಿ ಬೆಳೆದು ಅನೇಕ ಸಾಧಕರಿಗೆ ಬಡವರಿಗೆ ಆಶ್ರಯ ಕೊಟ್ಟಿದೆ. ಬಸವ ಧರ್ಮ ಪೀಠದಲ್ಲಿ ದಿನನಿತ್ಯ ದಾಸೋಹ ನಡೆಯುತ್ತದೆ. ಇದೆಲ್ಲವೂ ಕೂಡ ಬಸವಣ್ಣನವರ ಸಂಕಲ್ಪವೇ ಆಗಿತ್ತೇನೋ ಎನಿಸುತ್ತದೆ.

ಪರಿಪೂರ್ಣವಾಗಿ ಧರ್ಮ ಪ್ರಚಾರ ಯಾವ ಯಾವ ಮಾಧ್ಯಮಗಳಿಂದ ಸಾಧ್ಯವೋ ಆ ಎಲ್ಲಾ ಮಾಧ್ಯಮಗಳನ್ನು ಬಳಸಿಕೊಂಡು ಧರ್ಮ ಪ್ರಚಾರ ಗೈದಿದ್ದಾರೆ. ಪ್ರವಚನಕ್ಕೆ ಜನ ಕರೆದಾಗ ಮಾತ್ರ ಹೋಗದೆ, ತಾವೆ ಸ್ವತಃ ಊರೂರಿಗೆ ಹೋಗಿ ಪ್ರವಚನ ಮಾಡುವುದರ ಮುಖಾಂತರ, ಸಾಹಿತ್ಯ ರಚನೆಯ ಮುಖಾಂತರ, ಧ್ವನಿಸುರುಳಿಗಳನ್ನು ರೆಕಾರ್ಡ್ ಮಾಡುವುದರ ಮುಖಾಂತರ ಎಲ್ಲಕ್ಕೂ ಮಿಗಿಲಾಗಿ ಏನೂ ಅರಿಯದ ಮುಗ್ಧರು ಕೂಡ ಬಸವಣ್ಣನವರ ವ್ಯಕ್ತಿತ್ವವನ್ನು ಅರಿಯಲು, ಅನೇಕ ಕಷ್ಟಗಳನ್ನು ಸಹಿಸಿ 'ಕ್ರಾಂತಿಯೋಗಿ ಬಸವಣ್ಣ' ಎಂಬ ಚಲನಚಿತ್ರ ಕೂಡ ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯಿಂದ ನಿರ್ಮಿಸಿದ್ದಾರೆ.

ಪೂಜ್ಯ ಅಪ್ಪಾಜಿಯವರು ಜನಮನಗಳಲ್ಲಿ ವಚನ ಸಾಹಿತ್ಯದ ಬೀಜಗಳನ್ನು ನೆಟ್ಟು ಪ್ರವಚನವೆಂಬ ಅಮೋಘ ವರ್ಷಧಾರೆಗೈದು ಬಸವ ತತ್ತ್ವದ ಬೆಳೆಯನ್ನು ಬೆಳೆಸಿದ್ದಾರೆ. ಆದರೆ ಇಂದು ಅಂಥ ಮಳೆ ಇನ್ನು ಸಾಧ್ಯವಿಲ್ಲವಲ್ಲ ಎಂದು ದುಃಖವಾಗುತ್ತದೆ. ಆದರೂ ಚಿಂತೆಯಿಲ್ಲ ಪೂಜ್ಯ ಮಾತಾಜಿ ಎನ್ನುವಂತ ದೊಡ್ಡ Reservoir ಬಸವ ತತ್ತ್ವದ ಜಲಾಶಯವನ್ನೇ ನಿರ್ಮಿಸಿದ್ದಾರೆ. ಈ ಜಲಾಶಯ ಅಂದಿನಿಂದ ಇಂದಿನವರೆಗೂ ಬಸವ ಭಕ್ತರ ಹೃನ್ಮನಗಳನ್ನು ತಣಿಸುತ್ತಲೇ ಇದೆ. ಮತ್ತೆ ಅವರು ಸೃಷ್ಟಿಸಿದ ಅದ್ಭುತವಾದ ಸಾಹಿತ್ಯದಿಂದ ಎಂದೆಂದಿಗೂ ಬಸವ ತತ್ತ್ವ ಹಚ್ಚಹಸುರಾಗಿರುವಂತೆ ಮಾಡಿದ್ದಾರೆ. ಅದಕ್ಕಾಗಿ ನಾವೂ ಪೂಜ್ಯದ್ವಯರಿಗೆ ಎಷ್ಟೇ ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೇ ಪೂಜ್ಯ ಗುರೂಜಿಯವರ ಇಂಥ ದಿವ್ಯವಾದ ಬದುಕನ್ನು ನೋಡಿದಾಗ.

ಲೋಕದಂತೆ ಬಾರರು, ಲೋಕದಂತೆ ಇರರು;
ಲೋಕದಂತೆ ಹೋಗರು ನೋಡಾ, ಪುಣ್ಯದಂತೆ ಬಪ್ಪರು
ಜ್ಞಾನದಂತೆ ಇಪ್ಪರು ಮುಕ್ತಿಯಂತೆ ಹೋಹರು ನೋಡಯ್ಯ
ಉರಿಲಿಂಗದೇವಾ ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು

ಎನ್ನುವ ಉರಿಲಿಂಗದೇವ ಶರಣರ ವಚನದಂತೆ ತಾವು ಈ ಜಗತ್ತನ್ನು ಬಿಡುವ ಮೊದಲೇ ಎಂದೆಂದೂ ಅಳಿಯದಂಥ ತಮ್ಮ ಹೆಜ್ಜೆಗಳನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ. ಆ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ನಾವೆಲ್ಲರೂ ಏಕ ಮನಸ್ಸಿನಿಂದ ನಡೆದದ್ದೇ ಆದರೆ ಅವರ ಆ 40 ವರ್ಷಗಳ ವಾಙ್ಮಯ ತಪಸ್ಸು ಸಾರ್ಥಕವಾದಂತಾಗುತ್ತದೆ ಎಂದು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಜಂಗಮರ ಆಪೋಶನ ವೀರಶೈವ

– ವಿಶ್ವಾರಾಧ್ಯ ಸತ್ಯಂಪೇಟೆ

ಹಿಂದಣ ಹೆಜ್ಜೆಯನರಿಯದೆ ಮುಂದಡಿ ಇಡಲಾಗದು ಎಂಬ ಅನುಭಾವಿ ಅಲ್ಲಮನ ಮಾತಿನಂತೆ ಶತಮಾನಗಳ ಉದ್ದಕ್ಕೂ ಮಲಗಿದ್ದ ಲಿಂಗಾಯತ ಜನಾಂಗ ಇದೀಗ ರಾಜ್ಯದಲ್ಲಿ ಮೈಕೊಡವಿ ಮೇಲೆದ್ದು ನಿಂತಿದೆ. ಹನ್ನೆರಡನೆಯ ಶತಮಾನದಲ್ಲಿ ಸಕಲ ಜೀವಾತ್ಮರಿಗೆ ಲೇಸ ಬಯಸಿ ಕಲ್ಯಾಣ ರಾಷ್ಟ್ರ ನಿರ್ಮಾಣದ ಕನಸು ಹೊತ್ತಿದ್ದ ಚಳುವಳಿ ಪುರೋಹಿತರ ಕಪಿಮುಷ್ಠಿಯಿಂದ ಮುರುಟಿ ಹೋಯಿತು. ಎಂದಿನಂತೆ ಪುರೋಹಿತಶಾಹಿ ವ್ಯವಸ್ಥೆ ರಾಜಶಕ್ತಿಯನ್ನು ಬಳಸಿಕೊಂಡು ಅದನ್ನು ಇನ್ನೆಂದೂ ಬೆಳೆಯದ ಕೊಡಲಿ ಏಟು ಹಾಕಬಯಸಿತ್ತು. ಈ ಕಾರಣಕ್ಕಾಗಿ ಅದು ಸಮಾಜದಲ್ಲಿ ಹಿಂಸೆಯನ್ನು ಹುಟ್ಟುಹಾಕಿತು. ಜನ ಸಾಮಾನ್ಯ ಭಯದ ನೆರಳಲ್ಲಿ ಬದುಕುವಂತೆ ಮಾಡಿತು.

ಆದರೆ ಭೂಮಿಗೆ ಬಿದ್ದ ಬೀಜ ಕೆಟ್ಟಿತೆನಬೇಡ ಮುಂದಿನ ಫಲದೊಳಗೆ ಅರಸಿಕೋ ಎಂಬಂತೆ ಹನ್ನೆರಡನೆಯ ಶತಮಾನದ ಶರಣರ ಕನಸುಗಳು ಇಪ್ಪತ್ತೊಂದನೆಯ ಶತಮಾನದಲ್ಲಿ ಚಿಗರತೊಡಗಿದ್ದು ಆಶಾದಾಯಕ ಬೆಳವಣಿಗೆಯಾಗಿದೆ. ಇಡೀ ರಾಷ್ಟ್ರ ಸನಾತನ ಪರಂಪರೆಯ ಹಿಂದೆ ಬೆನ್ನು ಹತ್ತಿ ಅಧಃಪತನದ ಅಂಚಿಗೆ ಹೋಗಿ ನಿಂತಿರುವ ಸಮಯದಲ್ಲಿ ಕರ್ನಾಟಕದ ಲಿಂಗಾಯತರು ಸಿಡಿದೆದ್ದು ನಾವು ವೀರಶೈವರಲ್ಲ, ಹಿಂದುಳಂತೂ ಅಲ್ಲವೆ ಅಲ್ಲ ಎಂದು ಗುಲ್ಲೆಬ್ಬಿಸಿದ್ದಾರೆ. ಈ ಕೂಗಿನ ಬೆನ್ನ ಹಿಂದೆ ಯಾರು ಇದ್ದಾರೆ ಎಂಬುದು ಮುಖ್ಯವಲ್ಲ, ಆದರೆ ಅದು ಸತ್ಯವೋ ? ಮಿಥ್ಯವೋ ? ಎಂಬುದು ಗಮನಾರ್ಹವಾಗಿದೆ.

ಶರಣರ ತರುವಾಯ ವಚನ ಚಳುವಳಿ ನಾಶವಾಯಿತು. ಶರಣರು ಕಂಡ ಕನಸು ಕನಸಾಗಿಯೆ ಉಳಿಯಿತು. ಅವರು ಬರೆದ ವಚನ ಸಾಹಿತ್ಯದ ಕುರಿತು 15 ನೇ ಶತಮಾನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳು ಬಂದು 101 ಜನ ವಿರಕ್ತರು ಆ ಕಾರ್ಯ ಕೈಗೊಳ್ಳುವವರೆಗೂ ಮಕಾಡೆ ಮಲಗಿಬಿಟ್ಟಿತ್ತು. ಇದನ್ನು ಕೆಲವರು ಲಿಂಗಾಯತದ ಪುನರುಜ್ಜೀವನದ ಕಾಲ ಎಂದು ಕರೆಯುತ್ತಾರೆ. ಆದರೆ ಇದೆ ಸಂದರ್ಭದಲ್ಲಿ ವೀರಶೈವೀಕರಣಕ್ಕೊಳಪಟ್ಟ ಕಾಲವೂ ಅದಾಗಿತ್ತು ಎಂದು ವಿಷಾದದಿಂದ ಹೇಳಲೇಬೇಕಾಗಿದೆ. ಈ ಸಂದರ್ಭದಲ್ಲಿ ವಚನ ಸಾಹಿತ್ಯ ತುಂಬ ಹಿಂದೆ ಇರದೆ ಇದ್ದ ಸಂಸ್ಕೃತ ಶ್ಲೋಕಗಳು ವಚನಗಳಲ್ಲಿ ಸೇರಿಕೆಯಾದವು. ಜೊತೆಗೆ ವಚನಾಗಮ, ವಚನ ಶಾಸ್ತ್ರ ಎಂದು ಕರೆಯಲು ಶುರುವಿಟ್ಟುಕೊಂಡವು. 12 ನೇ ಶತಮಾನದ ಏಕಾಂತ ರಾಮಯ್ಯ ಎಂಬ ಶರಣ ಏಕೋರಾಮಾರಾಧ್ಯನಾಗಿ ಪರಿವರ್ತನೆಗೊಂಡ.

12 ಶತಮಾನದ ಯಾವುದೇ ಶರಣ ಚಳುವಳಿಯ ಸಂದರ್ಭದಲ್ಲಿ ಎಲ್ಲಿಯೂ ಕಾಣಿಸಿಕೊಳ್ಳದ ಚತುರಾಚಾರ್ಯರು ಹಾಗೂ ಪೀಠಗಳ ಬಗೆಗೆ ಎಲ್ಲಿಯೂ ಉಲ್ಲೇಖ ಕಂಡುಬರುವುದಿಲ್ಲ. ಈ ಚತುರಾಚಾರ್ಯರು ತಮ್ಮನ್ನು ತಾವು ಭಾರದ್ವಾಜ ಗೋತ್ರದವರು ಎಂದು ಕರೆದುಕೊಳ್ಳುತ್ತಿದ್ದರು. ತಳವರ್ಗದ ಸಮೂಹ ಇವರತ್ತ ಆಕರ್ಷಿತರಾಗುತ್ತಲೆ ಕ್ರಮೇಣ ಇವರು ಶಿವಗೋತ್ರಕ್ಕೆ ತಗಲುಬಿದ್ದರು. ತಮ್ಮದು ನಂದಿ,ವೀರಭದ್ರ ಹಾಗೂ ವೃಷಭಗೋತ್ರಗಳೆಂದು ಹೇಳಿಕೊಳ್ಳುತ್ತ ಪುರೋಹಿತಶಾಹಿ ವ್ಯವಸ್ಥೆಯನ್ನು ಜನತೆಯ ಮೇಲೆ ತಣ್ಣಗೆ

ಹೇರತೊಡಗಿದರು.ಆದರೆ ಇಂದಿಗೂ ಇವರ ಮಠಗಳಲ್ಲಿರುವ ಕನ್ನಡ ಸಂಸ್ಕೃತ ತಾಳೆಗರಿಗ್ರಂಥ ಕಾಗದ ಪತ್ರಗಳು 'ಓಂ ಶ್ರೀಗುರುಬಸವಲಿಂಗಾಯ ನಮಃ' ಎಂದು ಒಕ್ಕಣೆಯಿಂದಲೆ ಅರಂಭವಾಗಿರುವುದು ಸಿಕ್ಕುತ್ತವೆ. ಷಡಕ್ಷರದೇವ, ಬಾಳೆಹಳ್ಳಿ ಪೀಠದ ಕುಮಾರ ಚೆನ್ನಬಸವ ಮೊದಲು ಮಾಡಿ ಎಲ್ಲ ಗುರುವರ್ಗದ ಮಠಾಧೀಶರು ಹೆಚ್ಚಾಗಿ ಶರಣರನ್ನೇ ಕುರಿತು ಸಾಹಿತ್ಯ ಬರೆದುದೆ ಇದಕ್ಕೆ ನಿದರ್ಶನವಾಗಿದೆ.

ವೀರಶೈವ ಅನ್ನುವ ಶಬ್ದ ಕರ್ನಾಟಕದಲ್ಲಿ ಹುಟ್ಟಿದ್ದೆ 1368 ಕ್ಕೆ ಬಸವ ಪುರಾಣದಲ್ಲಿ ಮೊಟ್ಟ ಮೊದಲು ವೀರಶೈವ ಪದ ಬರುತ್ತದೆ. ಅದಕ್ಕಿಂತ ಮೊದಲು ಎಲ್ಲಿಯೂ ಇದು ಕಾಣಿಸಿಕೊಳ್ಳುವುದಿಲ್ಲ. 16 ನೇ ಶತಮಾನದ ಬೆಳಗಾವಿ ಜಿಲ್ಲೆ ಸವದತ್ತಿಯ ಹೂಲಿಮಠ, ಗುರುಪರಂಪರೆಗೆ ಸೇರಿದ ಮಠದ ಸಿದ್ದನಂಜೇಶ ಎಂಬ ಸ್ವಾಮಿ, ಕವಿಯೂ ಆಗಿದ್ದನು ಈ ಕವಿ ಬಸವಣ್ಣನಿಂ ಅಧಿಕ ದೈವವಿಲ್ಲ ಎಂದು ಹೊಗಳುತ್ತಾನೆ. ಅಷ್ಟೇಕೆ ? ರಂಭಾಪುರಿ ಪೀಠದ ದಿಗಂಬರ ಮುನಿ(ನಾಥ ಪಂಥದ)ಯ ತರುವಾಯ ಅಧಿಕಾರಕ್ಕೆ ಬಂದ ಕುಮಾರ ಚೆನ್ನಬಸವ ಎಂಬ ಪೀಠಾಧಿಪತಿ ಬಸವ ಪುರಾಣದಲ್ಲಿ ಬರುವ ಕಥೇಗಳೆಲ್ಲವನ್ನೂ ಒಂದೆಡೆ ಸೇರಿಸಿ, ಬಸವ ಪುರಾಣ ಕುರಿತು, ಈ ಕುಮಾರ ಚೆನ್ನಬಸವನ ಪ್ರೀತಿ ಎಂಥದ್ದೆಂದರೆ ತನ್ನನ್ನು ತಾನು ಭಕ್ತ ಜನಕ ಬಸವಣ್ಣನಂತೆ ಇದ್ದೇನೆ ಎಂದು ಸಮೀಕರಿಸಿಕೊಂಡು ಹೆಮ್ಮೆ ಪಡುತ್ತಾನೆ.

ವಾಸ್ತವವಾಗಿ ಬಸವಾದಿ ಶರಣರು ಬೋಧಿಸಿದ ಧರ್ಮವೆಂದರೆ ಅದು ಲಿಂಗಾಯತ. ಆದರೆ ಹದಿನೈದನೆಯ ಶತಮಾನದಲ್ಲಿ ಆಂಧ್ರದಿಂದ ಬಂದ ಆರಾಧ್ಯ ಜಂಗಮರು ಇಲ್ಲಿನ ಜಂಗಮರನ್ನು ಆಪೋಶನ ಮಾಡಿದರು. ಅವರು ತಮ್ಮ ಕರ್ಮಠತ್ವವನ್ನು ಇಲ್ಲಿನ ಲಿಂಗಾಯತರ ಮೇಲೆ ಹೇರಿ ಅವರನ್ನೂ ಕುಲಗೆಡಿಸಿದರು. ಆಗ ಅಸ್ತಿತ್ವದಲ್ಲಿದ್ದ ವೀರವೈಷ್ಣವರ ವಿರುದ್ಧ ಈ ವೀರಶೈವ ಧರ್ಮವನ್ನು ಹುಟ್ಟು ಹಾಕಿ ವೀರಶೈವವನ್ನು ಪ್ರಚಲಿತಕ್ಕೆ ತಂದರು. ವೀರಶೈವ ಶಬ್ದ ಯಾವಾಗ ಪ್ರಚಲಿತಕ್ಕೆ ಬಂತು ? ಎಂಬ ಸ್ವಾರಸ್ಯಕರ ಸಂಗತಿ ಮೈಸೂರು ವಿಶ್ವವಿದ್ಯಾಲಯ 1935 ರಲ್ಲಿ ಪ್ರಕಟಿಸಿದ ದಿ ಮೈಸೂರು ಟ್ರೈಬ್ಸ್ ಮತ್ತು ಕಾಸ್ಟ್ ಎಂಬ ಗ್ರಂಥದ ಮೊದಲ ಸಂಪುಟದ 153 ಹಾಗೂ 154 ನೆ ಪುಟದಲ್ಲಿ ನಮೂದಾಗಿದೆ.

ಈ ಪಂಚಪೀಠದವರು ಎಂದೂ ಬಸವ ತತ್ವವನ್ನು ಪ್ರತಿಪಾದಿಸಿದವರೆ ಅಲ್ಲ. 19 ಹಾಗೂ 20 ನೇ ಶತಮಾನದ ಆದಿ ಭಾಗದಲ್ಲಿ ಇತಿಹಾಸವನ್ನು ನಾವು ಸುಮ್ಮನೆ ಗಮನಿಸಿದಾಗ ಎಲ್ಲೆಡೆಯೂ ಲಿಂಗಾಯತ ಪದ ಬಳಕೆಯೆ ಹೆಚ್ಚು ಪ್ರಚಲಿತವಿದ್ದದ್ದು ಕಂಡುಬರುತ್ತದೆ.

20 ನೇ ಶತಮಾನದ ಆರಂಭದಲ್ಲಿ ಸೊಲ್ಲಾಪುರದ ದಾನಿ ವಾರದ ಮಲ್ಲಪ್ಪನವರಿಗೆ ಗಂಟು ಬಿದ್ದ ಈ ಚತುರಾಚಾರ್ಯರು ಸ್ಥಾಪಿಸಿದ್ದ ಲಿಂಗೀ ಬ್ರಾಹ್ಮಣ ಗ್ರಂಥಮಾಲೆಯಲ್ಲಿ ಇವರು ಬ್ರಾಹ್ಮಣ ಸಮುದಾಯದವರೆಂದು ಸ್ಪಷ್ಟವಾಗಿ ನಿರೂಪಿತವೂ ಆಗಿದೆ. ಉತ್ತರ ಕರ್ನಾಟಕದ ಭಾಗದಲ್ಲಿ ಲಿಂಗಾಯತ ಸಮುದಾಯದಲ್ಲಿ ಯಾವತ್ತೂ ವೀರಶೈವ ಪದ ಬಳಕೆಯಾಗಲೆ ಇಲ್ಲ. 20 ನೇ ಶತಮಾನದ ಆದಿ ಭಾಗದಿಂದ ವೀರಶೈವವನ್ನು ಹೆಚ್ಚು ಪ್ರಚಲಿತವಾಗುವಂತೆ ಈ ಪಂಚಪೀಠಗಳು ದೊಡ್ಡ ಹುನ್ನಾರವನ್ನೆ ನಡೆಸಿದವು.

ಈ ಹಿಂದೆಯೂ ವೀರಶೈವ ಪದ ಬಳಕೆಯೆ ನಿಜವಾಗಿದ್ದಲ್ಲಿ 1867 ರಲ್ಲಿ ಡೆಪ್ಯೂಟಿ

ಚೆನ್ನಬಸವಪ್ಪನವರು ಸ್ಥಾಪಿಸಿದ್ದ ವಿದ್ಯಾರ್ಥಿ ನಿಲಯಕ್ಕೆ ಲಿಂಗಾಯತ ಫ್ರೀ ಬೋರ್ಡಿಂಗ್ ಎಂದು ಹೆಸರಿಡುತ್ತಿರಲಿಲ್ಲ. 1885 ರಲ್ಲಿ ಸ್ಥಾಪಿಸಲಾದ ಧಾರವಾಡದ ಲಿಂಗಾಯತ ಅಭಿವೃದ್ಧಿ ಸಂಸ್ಥೆಗೆ ಲಿಂಗಾಯತ ಪದ ಹೊಂದುತ್ತಿರಲಿಲ್ಲ. 1916 ರಲ್ಲಿ ಸ್ಥಾಪಿತವಾದ ಬೆಳಗಾವಿಯ ಕರ್ನಾಟಕ ಲಿಂಗಾಯತ ಏಜುಕೇಷನ್ ಸೊಸೈಟಿ ಕೂಡ ಲಿಂಗಾಯತ ಪದ ಹೊಂದಬೇಕಾಗಿರಲಿಲ್ಲ. ಅಷ್ಟೇಕೆ ? ಬೆಂಗಳೂರಿನ ಟೌನಹಾಲ್ ಕಟ್ಟಿಸಿದ ಪುಟ್ಟಣ್ಣ ಶೆಟ್ಟರೂ ಕೂಡ 'ಲಿಂಗಾಯತ' ಹೆಸರಿನ ವಿದ್ಯಾ ಸಂಸ್ಥೆ ಸ್ಥಾಪಿಸಿದರು.

ಮೂಲತಃ ಶೈವ ಆಗಮಿಕ ಬ್ರಾಹ್ಮಣರಾಗಿದ್ದ ಇವರು ಆಂಧ್ರದಿಂದ ಬಂದವರು. ಕರ್ನಾಟಕಕ್ಕೆ ಕಾಲಿಟ್ಟ ಇಂಥವರಲ್ಲಿ ಕೆಲವರು ಇಲ್ಲಿಯ ಶರಣ ಜಂಗಮರೊಂದಿಗೆ ಹೊಂದಿಕೊಂಡು ಬಾಳುವ ಸಲುವಾಗಿ ತಮ್ಮ ಕಡ್ಡಾಯ ಜನಿವಾರದ ಜೊತೆಗೆ ಐಚ್ಛಿಕ ಇಷ್ಟಲಿಂಗವನ್ನೂ ಕಡ್ಡಾಯವಾಗಿ ಕಟ್ಟಿಕೊಂಡರು. ಇನ್ನೂ ಹೊಂದಿಕೊಂಡು ಹೋಗುವ ಸಲುವಾಗಿ ಜನಿವಾರ ತ್ಯಜಿಸಿ ಎದೆಯ ಮೇಲೆ ಲಿಂಗವೊಂದನ್ನೆ ಕಟ್ಟಿಕೊಂಡು ಬಸವ ಪರಂಪರೆಯನ್ನು ಹಾಳುಗೆಡವಿದರು ಎಂದು ಡಾ. ಎಂ.ಎಂ.ಕಲಬುರ್ಗಿಯವರು ತಮ್ಮ ಬಸವಮಾರ್ಗ ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

ಸಹಜವಾಗಿಯೇ ಈ ಆರಾಧ್ಯ ಜಂಗಮರು ತಮ್ಮ ಮೂಲ ಪರಂಪರೆಯ ವೇದಘೋಷ, ಹೋಮ ಹವನ, ಸಂಸ್ಕೃತ ಧರ್ಮಗ್ರಂಥ, ಪರಂಪರೆಯ ಸುಳ್ಳು ಪ್ರಾಚೀನತೆಯನ್ನು ಇತ್ಯಾದಿ ಕಟ್ಟುಕತೆಗಳನ್ನು ಹೆಣೆಯತೊಡಗಿದರು. ರೇಣುಕರು ಯಾರು ? ಅವರ ತಂದೆ ತಾಯಿ ಯಾರು ? ಅವರು ಎಷ್ಟು ವರ್ಷ ಬದುಕಿದ್ದರು ? ಅವರ ವಿಚಾರಗಳನ್ನು ಯಾವ ಭಾಷೆಯಲ್ಲಿ ಬೋಧಿಸಿದರು ? ಎಂಬ ಪ್ರಶ್ನೆಗಳಿಗೆ ಇಂದಿಗೂ ಸಮರ್ಪಕ ಉತ್ತರವನ್ನು ಈ ಪಂಚಪೀಠಗಳು ನೀಡಿಲ್ಲ. ಇದರ ಬದಲಾಗಿ ಕಾಗಕ್ಕ ಗುಬ್ಬಕ್ಕನ ಕತೆಯನ್ನು ಹೆಣೆದು ಜನರ ಮುಂದೆ ನಗೆಪಾಟಲಿಗೆ ಗುರಿಯಾಗುತ್ತಿದೆ.

ರೇಣುಕರು ಅಗಸ್ತ್ಯನಿಗೆ ಧರ್ಮಬೋಧೆ ಮಾಡಿದರು. ರಾವಣನಿಗೆ ಲಿಂಗ ಕಟ್ಟಿದರು. ಆ ಮೇಲೆ ರೇಣುಕರು ಶಂಕರಾಚಾರ್ಯರಿಗೆ ಒಂಭತ್ತನೆಯ ಶತಮಾನದಲ್ಲಿ– ಚಂದ್ರಮೌಳಿಗೆ ಲಿಂಗಕೊಟ್ಟರು. ಒಬ್ಬ ವ್ಯಕ್ತಿಗೆ ಇರುವ ಆಯುಷ್ಯವಾದರೂ ಎಷ್ಟು ? ಕಾಲಾನು ಕಾಲದಿಂದ ಬದುಕಲು ಅವರೇನು ಕಾಲಾತೀತರೆ ? ಅವರಿಗೆ ಕಾಲದ ಪರಿಮಿತಿ ಇಲ್ಲವೆ ? ಎಂದು ಕೆಳ ಹೊರಟರೆ ಇವರ ಅಸಲಿ ಹೂರಣ ಹೊರಗೆ ಬರುತ್ತದೆ. ಇನ್ನು ಕೆಲವರು ವೀರಶೈವ ಧರ್ಮವನ್ನು ಸ್ವರ್ಗದಲ್ಲಿ ಸ್ಥಾಪಿಸಿದರು ಎಂದು ಹೇಳುತ್ತಾರೆ. ಆದರೆ ಆ ಸ್ವರ್ಗ ಎಲ್ಲಿದೆ ? ಧರ್ಮವನ್ನು ಸ್ಥಾಪಿಸಲು ಅದೇನು ಸ್ಥಾವರವೆ ಎಂದು ಕೇಳ ಹೊರಟರೆ ನೀವು ಧರ್ಮ ದ್ರೋಹಿಗಳು ಎಂಬ ಬಿರುದನ್ನು ದಯಪಾಲಿಸುತ್ತಾರೆ.

ಒಟ್ಟಿನಲ್ಲಿ ಪಂಚಪೀಠಗಳಿಗೂ ಬಸವ ಪ್ರಣೀತ ಶರಣ ಧರ್ಮಕ್ಕೂ ಯಾವುದೇ ಬಾದ್ರಾಯಣ ಸಂಬಂಧವಿಲ್ಲ. ಆದರೆ 1904 ರಲ್ಲಿ ಹಾನಗಲ್ ಕುಮಾರಸ್ವಾಮಿಗಳ ನೇತೃತ್ವದಲ್ಲಿ ಕಟ್ಟಿದ ಶಿವಯೋಗ ಮಂದಿರ ಹಾಗೂ ವೀರಶೈವ ಮಹಾಸಭೆ ಎಂಬ ಸಂಸ್ಥೆಗಳ ಕಟ್ಟುವಿಕೆಯ ಹಿಂದೆ ಬ್ರಾಹ್ಮಣ್ಯ ಅರಿಯದೆ ಹೋದದ್ದು ಲಿಂಗಾಯತರ ದುರಂತವಾಗಿದೆ. ಜಾತಿ ಜಂಗಮವಾದಿಯಾಗಿದ್ದ ಕುಮಾರ ಸ್ವಾಮಿಗಳು ಚಿತ್ರದುರ್ಗದ ಮುರುಘಾಮಠಕ್ಕೆ ಜಗದ್ಗುರುವೆಂದು

ನಾಮಕರಣಗೊಳ್ಳಬೇಕೆಂದಿದ್ದರು. ಆದರೆ ಜಯದೇವ ಜಗದ್ಗುರುಗಳು ಆ ಪೀಠಕ್ಕೆ ಬಂದರು. ಇದನ್ನು ಹೇಗಾದರೂ ಸೈ ಸೇಡು ತೀರಿಸಿಕೊಂಡು ನಾನು ಅವರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಚಿರಸ್ಥಾಯಿಯಾಗಬೇಕೆಂದು ಬಯಸಿ ಹೂಡಿದ ಹುನ್ನಾರ ಇಂದು ವಚನ ಪರಂಪರೆಗೆ ಮುಳ್ಳಾಗಿ ಕಾಡತೊಡಗಿದೆ.

ಶಿವಯೋಗ ಮಂದಿರದಲ್ಲಿ ಕೇವಲ ಜಾತಿ ಜಂಗಮರು ಮಾತ್ರ ಕಲಿಯಬೇಕು ಎಂಬ ಬೈಲಾವೆ ಇಂದು ಎಲ್ಲಾ ರಾದ್ಧಾಂತಗಳಿಗೆ ಮೂಲವಾಗಿದೆ. ಇಲ್ಲಿ ಕಲಿತು ಬಂದ ಜಾತಿ ಜಂಗಮರು ಸಹಜವಾಗಿಯೆ ಏನೊಂದು ಅರಿಯದ ಲಿಂಗಾಯತರ ತಲೆಯ ಮೇಲೆ ವೇದಶಾಸ್ತ್ರ, ಆಗಮ, ಕರ್ಮಠತನ, ಜಾತಿ ಪದ್ಧತಿ, ಮೇಲು ಕೀಳು, ಮಡಿ-ಮೈಲಿಗೆಗಳನ್ನು ಬೆಳೆಸಿದ್ದಾರೆ. ಲಕ್ಷ ದೀಪೋತ್ಸವ, ಕುಂಬಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಅಡ್ಡ ಪಲ್ಲಕ್ಕಿ ಮೆರವಣಿಗೆ ಮುಂತಾದ ಕರ್ಮಠತನವನ್ನು ಬೆಳೆಸಿದ್ದಾರೆ. ಗುಡಿ ಗುಂಡಾರಗಳನ್ನು ಕಡೆಗಣಿಸಿ ದೇಹವೇ ದೇವಾಲಯವೆಂದು ಸಾರಿದ್ದ ಶರಣ ಸಂಸ್ಕೃತಿಯನ್ನು ಮಣ್ಣು ಮಾಡಿ ಆ ಬಸವಣ್ಣನವರನ್ನು ಸ್ಥಾವರ ಮಾಡುವ ಹುನ್ನಾರ ಯಾವ ಎಗ್ಗಿಲ್ಲದೆ ನಡೆದು ಹೋಗಿದೆ. ಬಸವ ಪ್ರಣೀತ ಲಿಂಗಾಯತ ಧರ್ಮವನ್ನು ಪತ್ತಿಕ್ಕಬೇಕೆಂಬ ಹುನ್ನಾರ ಕೇವಲ ಅಲಿಖಿತ ನಿಯಮವಾಗಿ ಮಾತ್ರ ಉಳಿದಿಲ್ಲ. 1956 ರಲ್ಲಿ ಅಂದಿನ ರೇಣುಕಾ ಶಿವಾಚಾರ್ಯ ಶೂನ್ಯ ಸಿಂಹಾಸನಾಧಿಕಾರಿಯಾದ ಜಗದ್ಗುರು 'ಮಣಿಮಕುರ'ಎಂಬ ಪುಸ್ತಕದಲ್ಲಿ ಬಸವ ಧರ್ಮ, ಬಸವಣ್ಣನ ಸಾಹಿತ್ಯ, ಬಸವನ ಭಾವನೆ ಮತ್ತು ಶರಣರ ವಚನಗಳು ತಮ್ಮ ಪಂಚಾಚಾರ್ಯವೆಂಬ ಬೆಳೆಯಲ್ಲಿ ಕಸ ಹುಟ್ಟುವಂತೆ ಹುಟ್ಟಿಬಂದಿವೆ. ಇವು ಪಂಚಾಚಾರ್ಯರ ನೈಜ ಪ್ರಚಾರಕ್ಕೆ ಬೆಟ್ಟದಂತೆ ಅಡ್ಡಿಯಾಗಿವೆ. ಆದಾಗ್ಯೂ ಕಸದಂತಿರುವ ಶರಣರ ವಚನ ಸಾಹಿತ್ಯವನ್ನು ಕಿತ್ತೊಗೆದು ಮುನ್ನುಗ್ಗಬಹುದೆಂಬ ಆಸೆ ಎಂದು ಬರೆದುಕೊಂಡಿದ್ದಾರೆ.

ಕರ್ನಾಟಕದ ಇಂದಿನ ಬಹುತೇಕ ಲಿಂಗಾಯತರು ಬ್ರಾಹ್ಮಣ್ಯ ಮೂಲದ ವೀರಶೈವರಾಗಿ ಹೋದದ್ದು ಸುಳ್ಳಲ್ಲ. ಇದೀಗ ಅವರೆಲ್ಲರಲ್ಲಿ ವಚನ ಸಾಹಿತ್ಯದ ಓದಿನಿಂದ ಬಸವ ಪ್ರಜ್ಞೆ ಮೊಳಗಿದೆ. ಮಠೀಯ ಪರಂಪರೆ ನಮ್ಮದಲ್ಲ ಎಂಬ ಸುಳುಹುಗಳು ಅವರಿಗೆ ದೊರೆತಿವೆ. ವೇದಮೂರ್ತಿಗಳು ನಮ್ಮವರಲ್ಲ ಎಂಬ ತಿಳುವಳಿಕೆಯಿಂದ ಅವರು ತಮ್ಮ ಹಿಂದಿನ ಶರಣ ಪರಂಪರೆಯನ್ನು ಮುಂದುವರೆಸಿಕೊಂಡು ಮುನ್ನಡೆಯಲು ಲಿಂಗಾಯತ ಧರ್ಮವನ್ನು ಪ್ರತ್ಯೇಕ ಮಾಡಿಕೊಂಡು ಬದುಕಬೇಕೆಂದು ಇಚ್ಛಿಸಿದ್ದಾರೆ. ಆದರೆ ಮೆರೆಸುವವರು, ಅನ್ನಹಾಕುವವರು, ಕಾಲು ತೊಳೆಯುವವರು , ಅಪ್ಪೋರೆ, ಬುದ್ದ್ಯೋರ‍್ರಾ ಎಂದು ಕರೆದು ಕಾಲು ಹೊತ್ತುವವರು ಇಲ್ಲದೆ ಹೋದರೆ ನಮ್ಮನ್ಯಾರು ಕೇಳುತ್ತಾರೆ ? ಎಂಬ ದಿಗುಲು ಪಂಚಪೀಠಗಳ ಸನಾತನ ಪರಂಪರೆಯ ಬ್ರಾಹ್ಮಣ್ಯ ಮೂಲದ ಸ್ವಾಮಿಗಳಲ್ಲಿ ಇಣುಕಿಹಾಕಿದೆ.

ಬಸವ ಪ್ರಣೀತ ಲಿಂಗಾಯತ ಧರ್ಮ ಮಠೀಯ ವ್ಯವಸ್ಥೆಯನ್ನು ತೊಡೆದುಕೊಂಡು ಅನುಭವ ಮಂಟಪಗಳನ್ನು ಕಟ್ಟುವ ಮೂಲಕ ಸಕಲ ಜೀವಾತ್ಮರಿಗೆ ಲೇಸ ಬಯಸುವ ಧರ್ಮಕಟ್ಟುತ್ತದೋ ಅಥವಾ ಸನಾತನ, ಪುರಾತನ ಪರಂಪರೆಗಳೆಂಬ ಆಲದ ಬಿಳಲಿಗೆ ಜೋತು ಬಿದ್ದು ತನ್ನ ಅಂತ್ಯವನ್ನು ತಾನೇ ಹಾಡಿಕೊಳ್ಳುತ್ತದೋ ಎಂಬುದನ್ನು ಕಾಲವೆ ಉತ್ತರಿಸಲಿದೆ.

***

ಗುರುವಿನ ಮಹತ್ವ

–ಪೂಜ್ಯ ಶ್ರೀ ಬಸವಪ್ರಭು ಸ್ವಾಮೀಜಿ

ಭಾರತದೇಶ ಆಧ್ಯಾತ್ಮದ ತವರು. ಇಲ್ಲಿ ವೈವಿಧ್ಯಮಯವಾದ ಆಚಾರ, ವಿಚಾರ, ಸಂಸ್ಕೃತಿ ಕಲೆ, ಸಾಹಿತ್ಯದಿಂದೊಡಗೂಡಿ ತನ್ನದೆ ಆದ ಅಸ್ತಿತ್ವವನ್ನು ಈ ದೇಶ ಪಡೆದುಕೊಂಡಿದೆ. ಅದರಲ್ಲಿಯೂ ಗುರುವಿನ ಮಹತ್ವವನ್ನು ಮತ್ತು ಗುರುವಿಗೆ ಕೊಟ್ಟ ಗೌರವವನ್ನು ನಾವು ಎಂದೂ ಮರೆಯಲಾರೆವು. ಪ್ರತಿಯೊಂದು ರಂಗದಲ್ಲಿಯೂ ಸಾಧನೆ ಮಾಡಬೇಕಾದರೆ, ಗುರುವಿನ ಮಾರ್ಗದರ್ಶನ ಇದ್ದೆ ಇರುತ್ತದೆ. ಕನ್ನಡ ನಾಡಿನಲ್ಲಿ ಜನಿಸಿದ ಗುರು ಬಸವಣ್ಣನವರಾದಿಯಾಗಿ ಎಲ್ಲಾ ಶರಣರು ಅಷ್ಟಾವರಣಗಳನ್ನು ಹೇಳುವಲ್ಲಿ ಮೊದಲನೆ ಸ್ಥಾನ ಗುರುವಿಗೆ ಕೊಟ್ಟಿದ್ದಾರೆ. ಗುರುವಾದವನು ಮಾಂಸಪಿಂಡ ಕಳೆದು ಮಂತ್ರಪಿಂಡ ಮಾಡುವವನೆಂತಲೂ, ನರಜನ್ಮ ತೊಡೆದು ಹರಜನ್ಮ ಮಾಡುವನೆಂತಲೂ, ಭವಿವೆಂಬುದು ಕಳೆದು ಭಕ್ತನನ್ನಾಗಿ ಮಾಡುವವನಾಗಿಯೂ ಶೋಭಿಸುತ್ತಾನೆ.

ಗುರು ಎಂಬ ಪದವನ್ನು ಸಂಸ್ಕೃತ ಲಾಕ್ಷಣಿಕರು 'ಗು' ಎಂದರೆ ಕತ್ತಲೆ. 'ರು' ಎಂದರೆ ಬೆಳಕು ಎಂದೂ ಕರೆದು ವಿಶೇಷ ಅರ್ಥವನ್ನು ಕಲ್ಪಿಸಿಕೊಟ್ಟಿದ್ದಾರೆ. ಅಂದರೆ ಕತ್ತಲೆಯಿಂದ ಬೆಳಕನ್ನು ತೋರಿಸುವ ಶಕ್ತಿ ಗುರುವಿಗೆ ಇದೆ. ಅಜ್ಞಾನದಿಂದ ಸುಜ್ಞಾನದೆಡೆಗೆ ಕೊಂಡೊಯ್ಯನಾಗಿಯೂ ಗುರು ಕಾಣಬರುತ್ತಾನೆ. ಇನ್ನೊಂದು ಅರ್ಥದಲ್ಲಿ ಗುರುವನ್ನು ತತ್ವವಾಚಕವಾಗಿಯೂ ಬಳಸುತ್ತಾರೆ. 'ಅರಿವೆ ಗುರು' ತನ್ನ ಅಂತರಂಗದಲ್ಲಿ ಹೊರಹೊಮ್ಮಿದ ವಿಚಾರ ಮೊಳಗಿದಾಗ ಅದಕ್ಕೆ ಕಾರಣವಾದ ಅರಿವು ಅವನಿಗೆ ಗುರುವಾಗಿ ತೋರುತ್ತದೆ.

ಗುರು ವಚನದಿಂದಲ್ಲದೆ ಲಿಂಗವನರಿಯಬಾರದು.
ಗುರುವಚನದಿಂದಲ್ಲದೆ ಜಂಗಮವನರಿಯಬಾರದು.
ಗುರುವಚನದಿಂದಲ್ಲದೆ ಪ್ರಸಾದವನರಿಯಬಾರದು.
ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು.
ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದರೆ,
ಗುರುವಿಲ್ಲದ ಮುನ್ನ ಆಯಿತ್ತೆನ್ನಬಹುದೆ?
ತನ್ನಲ್ಲಿ ತಾನು ಸನ್ನಿಹಿತನಾದನೆಂದರೆ ಗುರುವಿಲ್ಲದೆ
ಅಗದು ಕೇಳಾ ಎನ್ನ ಅಜಗಣ್ಣನೆಂಬ ಗುರುವಿಲ್ಲದೆ
ಆರೂಢಿಯ ಕೂಟ ಸಮನಿಸದು ಕೇಳಾ (ಸವಸ)

ಶರಣೆ ಮುಕ್ತಾಯಕ್ಕ ತಾಯಿಯವರ ಈ ಮೇಲಿನ ವಚನ ಗುರುವಿನ ಮಹತ್ವವನ್ನು ಪುಷ್ಠಿಕರಿಸುತ್ತದೆ. ವಚನ ಎಂದರೆ ಮಾತು, ಭಾಷೆ, ಪ್ರತಿಜ್ಞೆ, ಉಪದೇಶ ಎಂಬ ಅರ್ಥವನ್ನು ಮಾಡಿಕೊಂಡಾಗ ಗುರುವಿನ ಉಪದೇಶದಿಂದಲ್ಲದೆ ಲಿಂಗವನರಿಯಲಿಕ್ಕೆ ಸಾಧ್ಯವಿಲ್ಲ. ಅಂದರೆ ಮಂಗಲಮಯನಾದ, ನಿತ್ಯಪರಿಪೂರ್ಣನಾದ ದೇವನ ಪರಿಕಲ್ಪನೆಯನ್ನ, ಜಂಗಮತತ್ವವನ್ನ, ಪ್ರಸಾದತತ್ವವನ್ನ ತನ್ನನ್ನು ತಾನರಿಯುವ ಮಾರ್ಗೋಪಾಯವನ್ನು ಶ್ರೇಷ್ಠ ಜ್ಞಾನಿಯಾದ,

ಅನುಭಾವಿಯಾದ ಗುರು ಮಾತ್ರ ಹೇಳುವವನಲ್ಲದೆ ಸಾಮಾನ್ಯನಿಗೆ ಸಾಧ್ಯವೆ? ಎಂಬುದನ್ನು ಸರ್ವಜ್ಞನು ತಮ್ಮ ವಚನದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

ಬೆಳ್ಳೊಳ್ಳಿ ಒಡೆದರೆ ಹೋಳಪ್ಪ ತೆರನಂತೆ
ಒಳ್ಳೆಯ ಗುರುವಿನ ಉಪದೇಶದಿಂದ
ಪಾಪವದು ಒಳ್ಳಿ ಬೀಳುವವು ಸರ್ವಜ್ಞ (ಸವ)

ಅಂದರೆ ಒಂದು ಬೆಳ್ಳುಳ್ಳಿ ಜಜ್ಜಿದಾಗ ಒಂದಕ್ಕೊಂದು ಮೆತ್ತಿಕೊಂಡ ಬೆಳ್ಳುಳ್ಳಿಯ ಗಡ್ಡೆ ಒಂದೊಂದೆ ಹೋಳುಗಳಾಗಿ ಬಿಚ್ಚಿಕೊಳ್ಳುವಂತೆ, ತತ್ವಜ್ಞಾನ ಕೋವಿದನಾದ ಯೋಗ್ಯ ಗುರುವಿನ ಅನುಭಾವದಿಂದ, ಹೊರಹೊಮ್ಮಿದ ಪ್ರವಚನಾಮೃತದಿಂದ ಎಂತಹ ಪಾಪಿಯ ಪಾಪವು ಕಳೆದು ಹೋಗುತ್ತದೆ. ಈ ರೀತಿ ಪಾಪವನ್ನು ಕಳೆದುಕೊಂಡ ಮಾನವ ಗುರುವಿನ ಮಾರ್ಗದರ್ಶನದಲ್ಲಿ ಸ್ವಾಭಿಮಾನದಿಂದ ಮುನ್ನಡೆಯಬೇಕು. ಗುರುವಾದವನು ಸಹಿತ ಯೋಗ್ಯ ಗುಣಲಕ್ಷಣವುಳ್ಳವನಾಗಿರಬೇಕು ಅವೆಂದರೆ ಕರುಣೆ, ಸತ್ಕಲೆ, ಶಾಸ್ತ್ರ ಪರಿಣತೆ ಇತ್ಯಾದಿ ಇರಬೇಕು. ಅಂದಾಗ ಅವನಿಂದ ಲಿಂಗ, ಜಂಗಮ, ಪ್ರಸಾದ, ತನ್ನ ತಾನರಿಯುವುದು ಸಾಧ್ಯವಾಗುವುದು ಎಂದು ಹೇಳುತ್ತಾ ಮತ್ತೊಂದು ವಚನ ಪ್ರಸ್ತಾಪ ಮಾಡುತ್ತಾರೆ.

ತನ್ನ ತಾನರಿದವಂಗೆ ಅರಿವೇ ಗುರು
ಅರಿವರಿತು ಮರಹು ನಷ್ಟವಾದಲ್ಲಿ, ದೃಷ್ಟ ನಷ್ಟವೇ ಗುರು
ದೃಷ್ಟ ನಷ್ಟ ಗುರು ತಾನಾದಲ್ಲಿ, ಮುಟ್ಟಿ ತೋರಿದವರಿಲ್ಲದಡೇನು?
ಸಹಜವ ನೆಲೆಗೊಳಿಸುವ ನಿರ್ಣಯನಿಃಪತಿಯೆ ಗುರು ನೋಡಾ
ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ. (ಸವಸ)

ತನ್ನ ತಾನರಿದ ಬಳಿಕ ಅರಿವೆಗುರುವನ್ನಾಗಿ ಮಾಡಿಕೊಂಡು ತಾನೇ ಗುರುವಾದರೂ ತನಗೆ ಕಾರಣನಾದ ಗುರುವನ್ನು ಮರೆಯಬಾರದು ಎಂಬ ಈ ಮಾತುಗಳು ಇಂದಿನ ದಿನಮಾನಕ್ಕೆ ಪ್ರಸ್ತುತವೆನಿಸುತ್ತವೆ. ಇಂದು ನಾವು ನೋಡುತ್ತೇವೆ ಗುರುವಿನಿಂದ ಏನೆಲ್ಲಾ ಪಡೆದುಕೊಂಡು ಪುನ: ಗುರುವಿಗೆ ಮೋಸ ಮಾಡಿ ಗುರುದ್ರೋಹ ಬಗೆದು ಹೊರಟು ಹೋಗುವವರೇ ಹೆಚ್ಚಾಗಿದ್ದಾರೆ. ಹೊರಗೆ ಹೋಗಿಯಾದರೂ ಸಾಧನೆ ಮಾತ್ರ ಅಪಪ್ರಚಾರ.

ಕಲ್ಯಾಣವೆಂಬುದು ಇನ್ನಾರಿಗೂ ಹೋಗಬಾರದು ಅಸಾಧ್ಯವಯ್ಯಾ!
ಆಸೆ ಆಮಿಷಗಳನಳಿದವರಿಗಲ್ಲದೆ ಕಲ್ಯಾಣದತ್ತ ಅಡಿ ಇಡಬಾರದು,
ಒಳಹೊರಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು
ನಾನೆಂಬುದ ಹರಿದವರಿಗಲ್ಲದೆ ಕಲ್ಯಾಣವ ಹೊಗಬಾರದು,
ಒಳಗೆ ತಿಳಿದು ಚನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆಯಳಿದೆನಾಗಿ ಆನು
ಕಲ್ಯಾಣವ ಕಂಡು ನಮೋ ನಮೋ ಎನುತಿರ್ದೆನು.

–ಜಗನ್ಮಾತಾ ಅಕ್ಕಮಹಾದೇವಿ

ಪ್ರವಚನ ಪಿತಾಮಹ ಮಹಾಜಗದ್ಗುರು ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು

ಮರ್ತ್ಯಲೋಕದ ಮನೆ ಹಾಳಾಗಬಾರದೆಂದು
ಕರ್ತನಟ್ಟಿದ ಬಸವ ಗುರುವನ್ನು
ಬಸವ ಕಟ್ಟಿದ ಧರ್ಮ, ಸಾಹಿತ್ಯ ಹಾಳಾಗಬಾರದೆಂದು
ಕರ್ತನಟ್ಟಿದ ಶರಣ ಹಳಕಟ್ಟಿಯವರನ್ನು
ಧರ್ಮ–ಸಾಹಿತ್ಯ ಪ್ರಸಾರಕ್ಕೆ ವೇದಿಕೆ ಅಣಿಗೊಳಿಸಲು
ಕರ್ತನಟ್ಟಿದ ಶರಣ.ಹರ್ಡೇಕರ ಮಂಜಪ್ಪನವರನ್ನು
ಧರ್ಮ ಸಾಹಿತ್ಯದ ಬೆಳಕನ್ನು ಮನೆ ಮನೆಗೆ ತಲುಪಿಸಲು
ಕರ್ತನಟ್ಟಿದ ಜಗದ್ಗುರು ಲಿಂಗಾನಂದರನ್ನು

ಇವರೆಲ್ಲರೂ ಪಿತಾಮಹರೇ
ಅಟ್ಟಿದವ ಜಗದ ಪಿತಾಮಹ ಲಿಂಗದೇವ
ಕಟ್ಟಿದವ ಧರ್ಮಪಿತಾಮಹ ಬಸವಣ್ಣನವರು
ಸಾಹಿತ್ಯ ಸಂಶೋಧಿಸಿದರು, ವಚನ ಪಿತಾಮಹ
ಲಿಂ.ಶರಣ.ಹರ್ಡೇಕರ್ ಮಂಜಪ್ಪನವರು
ಧರ್ಮವನ್ನು ಅಹರ್ನಿಶಿ ಪ್ರಸಾರ ಮಾಡಿದವರು
ಪ್ರವಚನ ಪಿತಾಮಹ ಜಗದ್ಗುರು ಪೂಜ್ಯ ಅಪ್ಪಾಜಿಯವರು
ಪೂಜ್ಯರ ಪ್ರವಚನ ಮಕ್ಕಳಿಗೆ ಮನರಂಜನೆಯ ತಾಣವಾಗಿತ್ತು
ಸಾಧಕ, ಸಾಧಕಿಯರಿಗೆ ಆತ್ಮರಂಜನೆಯ ಬೀಡಾಗಿತ್ತು
ಸರ್ವಪಂಥದವರಿಗೆ ಬಸವ ದರ್ಶನದ ರಂಗಾಯಣವಾಗಿತ್ತು
ಪುರೋಹಿತಶಾಹಿಗಳಿಗೆ ಬೀಳುತ್ತಿತ್ತು ಚಾಟಿಯ ಏಟು.

ಪೂಜ್ಯರ ಪ್ರವಚನವೆಂಬ ಬಿರುಗಾಳಿಗೆ ಸಂಪ್ರದಾಯವಾದಿಗಳೆಂಬ
ತರಗೆಲೆಗಳು ಹಾರಿಹೋದವು. ಮೂಢ ನಂಬಿಕೆ ಕಂದಾಚಾರವೆಂಬ ಕಸ ಹಸನಾಯಿತು
ಗುಡಿ–ಗುಂಡಾರಗಳೆಂಬ ಸ್ಥಾವರಗಳು ಬರಡಾಗತೊಡಗಿದವು
ಕಾಣೆಯಾಗಿದ್ದ ಲಿಂಗದೇವನ ಮತ್ತೆ ಮರಳಿ ಭಕ್ತರ ಕೊರಳಲಂಕರಿಸಿದ

ಬಹುದೇವತೋಪಾಸಕರ ಏಕದೇವತೋಪಾಸಕರಾಗಿ ಪರಿವರ್ತಿತರಾದರು
ಕ್ಷುದ್ರ, ಕಾಲ್ಪನಿಕ ದೇವಾನುದೇವತೆಗಳಾದ ತುಂಬಿದ ಜಗುಲಿಗಳು
ಪೂಜಾಮಂಟಪವಾದವು
ಲಿಂಗವಂತರು ಆಚರಿಸುತ್ತಿದ್ದ ವೈದಿಕ ಪರಂಪರೆಯ
ಹಬ್ಬ ಹರಿದಿನಗಳು ಇನ್ನಿಲ್ಲವಾದವು.
ಶರಣ ಧರ್ಮದ ಉತ್ಸವಗಳು ರಾರಾಜಿಸಿದವು

ಎಲ್ಲರ ಮನೆ-ಮನಗಳಲ್ಲಿ ಒಂದೇ ಮಂತ್ರ
ಅದುವೆ "ಓಂ ಶ್ರೀ ಗುರು ಬಸವ ಲಿಂಗಾಯ ನಮಃ"
ಅಖಂಡ ನಲವತ್ತು ವರ್ಷಗಳ ಕಾಲ ಪ್ರವಚನಗೈದು
ಬಿಡುವಿಲ್ಲದೆ, ದಣಿವಿಲ್ಲದೆ, ಭಯವಿಲ್ಲದ ಹೋರಾಟ ನಿಮ್ಮದು.
ಸಂಪ್ರದಾಯವಾದಿಗಳ, ವೈರಿಗಳ, ಜಂಗಮಶಾಹಿಗಳ
ಕಾಟದ ವಿರುದ್ಧ ಹೋರಾಡಿ ಧರ್ಮರಕ್ಷಣೆಗೈದ ವೀರಗಣಾಚಾರಿ ನೀವು.

ನಿಮ್ಮ ಪ್ರವಚನ, ತತ್ವೋಪದೇಶ ವ್ಯಾಖ್ಯಾನಗಳ ಬಲದಿಂದಲೇ
ನಾವಿಂದು ಎದೆ ತಟ್ಟಿ ಸಾರಿ, ಸಾರಿ ಹೇಳುತಿಹೆವು
ಬಸವಣ್ಣನವರೇ ಲಿಂಗಾಯತ ಧರ್ಮದ ಧರ್ಮಗುರುವೆಂದು
ಸಮಾನತೆ ಸಾರುವ ವಚನ ಸಾಹಿತ್ಯವೇ ಧರ್ಮಗ್ರಂಥವೆಂದು
ವಿಶ್ವಾತ್ಮನ ಕುರುಹಾದ ಇಷ್ಟಲಿಂಗವೇ ಧರ್ಮಲಾಂಛನವೆಂದು
ಕೂಡಲ ಸಂಗಮ, ಬಸವ ಕಲ್ಯಾಣಗಳೇ ಧರ್ಮಕ್ಷೇತ್ರಗಳೆಂದು
ಇಷ್ಟಲಿಂಗ ಸಹಿತ ಷಟ್ಕೋನ ಧ್ವಜವೇ ಧರ್ಮಧ್ವಜವೆಂದು
ಜಾತ, ವರ್ಣ, ವರ್ಗ, ರಹಿತ, ಧರ್ಮಸಹಿತ
ಶರಣ ಸಮಾಜ ನಿರ್ಮಾಣವೇ ಧರ್ಮದ ಧ್ಯೇಯವೆಂದು

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ರಾಷ್ಟ್ರೀಯ ಬಸವ ದಳ,
ಮಹಿಳಾ ಜಗದ್ಗುರು ಪೀಠ, ಅಕ್ಕಮಹಾದೇವಿ ಅನುಭಾವ ಪೀಠ
ಬಸವ ಧರ್ಮ ಪೀಠ, ಲಿಂಗಾಯತ ಧರ್ಮ ಮಹಾಸಭಾ ಇತ್ಯಾದಿ ಸಂಸ್ಥೆಗಳ
ಹುಟ್ಟುಹಾಕಿದ ಜಂಗಮಪುಂಗವರೇ ಬಸವ ಧರ್ಮ ಪೀಠದ ಪ್ರಥಮ ಪೀಠಾಧ್ಯಕ್ಷರೇ
ಶರಣ ಮೇಳದ ರೂವಾರಿಗಳೇ ಪ್ರವಚನ ಪಿತಾಮಹರೇ
ಬಸವ ಧರ್ಮದ ಜೀರ್ಣೋದ್ಧಾರಕರೇ ನಿಮ್ಮಿಂದಲೇ ಪುನರ್ಜನ್ಮ ತಾಳಿದೆ
ಮನುಕುಲದ ಧರ್ಮ, ಪರಿಪೂರ್ಣ ಧರ್ಮ, ಲಿಂಗಾಯತ ಧರ್ಮ.

– ಶಿವಕುಮಾರ ಹನಗಂಡಿ
"ಬಸವ ಸ್ಮೃತಿ" ಗಣೇಶ ನಗರ
ಧಾರವಾಡ

ಷಟ್ ಚಕ್ರಗಳು ಮತ್ತು ಷಟ್‌ಚಕ್ರಗಳ ನಡುವಿನ ಸಂಬಂಧ

– ಶ್ರೀಕಾಂತ್.ವೈ.ಬಿ

ಒಮ್ಮೆ ವಚನಸಾಹಿತ್ಯವನ್ನು ಓದುತ್ತಿರುವಾಗ ಮನಸ್ಸಿಗೆ ಒಂದು ವಿಶೇಷವಾದ ಶರಣರ ಆಂತರ್ಯದ ಸಂಗತಿಯೊಂದು ಗೋಚರವಾಯಿತು, ಅದುವೇ ಷಟ್ ಸ್ಥಲ ಮತ್ತು ಷಟ್ ಚಕ್ರಗಳ ನಡುವಿನ ಸಂಬಂಧ. ಇದು ಆಶ್ಚರ್ಯವಾದರೂ, ಸತ್ಯಸಂಗತಿಯೆಂದು ಸೂಕ್ಷ್ಮವಾಗಿ ಅವಲೋಕಿಸುವ ಸಾಧಕರಿಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಷಟ್ ಸ್ಥಲವನ್ನು ಆಂತರ್ಯದಲ್ಲಿ ಧಾರಣೆ ಮಾಡಿ, ಲಿಂಗಾಂಗಯೋಗದ ಸಾಧನೆಯಿಂದ ಚಕ್ರಗಳನ್ನು ಜಾಗೃತಮಾಡಿಕೊಳ್ಳಬಹುದಾದ ವಿಶೇಷ ವಿಧಾನವನ್ನು ಶರಣರು ಕಂಡುಕೊಂಡು, ತಮ್ಮ ಜೀವನದಲ್ಲಿ ನಿಜಸಾಧನೆಯನ್ನು ಮಾಡಿದುದು ಗಮನಾರ್ಹ.

ಹೇಗೆ ದೀಪವು ಬೆಳಗಲು ಪ್ರಣತೆ, ಎಣ್ಣೆ, ಬತ್ತಿ, ಅಗ್ನಿ ಮತ್ತು ಆಮ್ಲಜನಕ(ವಾಯು) ಇರಲೇಬೇಕೊ, ಹಾಗೆಯೇ ಸಾಧನೆಗೆ ಈ ದೇಹವೆಂಬ ಪ್ರಣತೆ, ಆಂತರ್ಯದ ಪವಿತ್ರತೆ ಅರ್ಥಾತ್ ಸಂಸ್ಕಾರದ ಎಣ್ಣೆ, ಶ್ರದ್ಧೆ ಎಂಬ ಬತ್ತಿ, ಜ್ಞಾನವೆಂಬ ಜ್ಯೋತಿ ಮತ್ತು ಗುರು ಪರಮಾತ್ಮನ ಅನುಗ್ರಹವೆಂಬ ಆಮ್ಲಜನಕ(ವಾಯು) ಇರಬೇಕು. ಇಲ್ಲದಿದ್ದರೆ ಸಾಧನೆ ಕುಂಠಿತಗೊಳ್ಳುವುದರಲ್ಲಿ ಸಂಶಯವಿಲ್ಲ. ಆಂತರ್ಯದ ಪವಿತ್ರತೆ ಅರ್ಥಾತ್ ಸಂಸ್ಕಾರವು ಈ ಷಟಸ್ಥಲಗಳ ಸಾಧನೆಯಿಂದ ದೊರೆಯುತ್ತದೆ. ಇದರಿಂದ ದೇಹದಲ್ಲಿರುವ ಋಣಾತ್ಮಕ ಶಕ್ತಿಗಳು ನಶಿಸಿ, ಕುಂಡಲಿನಿ ಚಕ್ರಗಳು ಶುದ್ದೀಕರಣವನ್ನು ಹೊಂದಿ ಸಶಕ್ತವಾಗುವುದು. ಸತತ ಲಿಂಗಾಂಗಯೋಗದಲ್ಲಿ ನಿರತನಾದಾಗ ಆತ್ಮನಲ್ಲಿ ವಿನೂತನ ಶಕ್ತಿಗಳು ಗೋಚರಿಸಲಾರಂಭಿಸುವವು. ಹಕ್ಕಿಗೆ ರೆಕ್ಕೆ ಬಲಿತಾಗ ಹೇಗೆ ಗಗನವನ್ನು ಹಾರಿ ಜಗದ ಪರ್ಯಟನೆಯನ್ನು ಮಾಡುವುದೋ, ಹಾಗೆಯೇ ಸಾಧಕ ಲಿಂಗಾಂಗ ಯೋಗ ಸಾಧನೆಯಿಂದ ಆಧ್ಯಾತ್ಮಬಲದ ರೆಕ್ಕೆಗಳು ಮೂಡಿ ಆತ್ಮ ಈ ಷಟಸ್ಥಲಗಳ ಪರ್ಯಟನೆಯನ್ನು ಮಾಡಲು ಮತ್ತು ಆತ್ಮೋನ್ನತಿ ಸ್ಥಿತಿಗೆ ಏರಲು ಸಾಧ್ಯವಾಗುತ್ತದೆ. ಆದ್ದರಿಂದ ಆಂತರ್ಯದ ಉನ್ನತಿಗೆ ಕಾರಣವಾಗುವ ಈ ಷಟಸ್ಥಲಗಳ ಬಗ್ಗೆ ಮತ್ತು ಕುಂಡಲಿ ಚಕ್ರಗಳ ಬಗ್ಗೆ ತಿಳಿದುಕೊಳ್ಳುವುದು ಬಹುಮುಖ್ಯವೆಂದೆನಿಸುತ್ತದೆ.

ಇಲ್ಲಿ 'ಷಟ್' ಎಂದರೆ ಆರು, 'ಸ್ಥಲ' ಎಂದರೆ ಸೋಪಾನ ಅರ್ಥಾತ್ ಆತ್ಮನು ಸಾಧನೆಯಲ್ಲಿ ನಿಂತಂತಹ ನಿಲುವನ್ನ ಇದು ಸೂಚಿಸುತ್ತದೆ. ಈ ಆರು ಸ್ಥಲದ ಸೋಪಾನದಿಂದ ಅಥವ ಮೆಟ್ಟಿಲುಗಳಿಂದ ಆತ್ಮವು ತನ್ನ ನಿಜದರಿವನ್ನು ಕಂಡುಕೊಂಡು, ಪರಮ ಪಾವನ ಮೂರ್ತಿಯಾಗಿ ಪರಮಾತ್ಮನೊಂದಿಗೆ ಸೇರುತ್ತಾನೆ. ಇಲ್ಲಿ ಷಟಸ್ಥಲ ಮತ್ತು ಷಟ್‌ಚಕ್ರಗಳನ್ನು ಹೀಗೆ ವಿವರಿಸಬಹುದು:

ಷಟ್ ಸ್ಥಲಗಳೆಂದರೆ : ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ

ಷಟ್‌ಚಕ್ರಗಳೆಂದರೆ:

ಮೂಲಾಧಾರ, ಸ್ವಾದಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ನಮಗೆ ಸಾಮಾನ್ಯವಾಗಿ ತಿಳಿದಿರುವಂತೆ, ಒಟ್ಟು ಶರಣರು ನಮಗೆ ನೀಡಿರುವ ಸ್ಥಲಗಳು ಆರು ಮತ್ತು ಗುರುತಿಸಿರುವ ಆಧ್ಯಾತ್ಮದ ಚಕ್ರಗಳು ಆರು.

ಆದರೆ ಈ ಸ್ಥಲಗಳನ್ನು ಮೀರಿ ಅಂದರೆ ಐಕ್ಯ ಸ್ಥಲವನ್ನು ಮೀರಿ ಹೋಗುವ ಬಹುಸೂಕ್ಷ್ಮ ಸ್ಥಲವನ್ನು ಸಹ ಶರಣರು ಕಂಡುಕೊಂಡಿದ್ದರು. ಅಂದರೆ ಆಜ್ಞಾ ಚಕ್ರವನ್ನು ದಾಟಿ ಬಹು ಸೂಕ್ಷ್ಮವಾದ ಚಕ್ರಗಳನ್ನು ಜಾಗೃತಗೊಳಿಸಿಕೊಳ್ಳುವ ಸಾಧನಾ ಮಾರ್ಗವನ್ನು ಅಥವ ಸೂಕ್ಮಸ್ಥಲವನ್ನು ಸಹ ಶರಣರು ನಮಗೆ ದಯಪಾಲಿಸಿರುವರು, ಅವುಗಳನ್ನು ಇಲ್ಲಿ ಗಮನಿಸಬಹುದು:

ಸೂಕ್ಷ್ಮ ಸ್ಥಲಗಳು ನಿರವಯಸ್ಥಲ, ನಿರಾಳ ಸ್ಥಲ, ನಿರಾಲಂಬ ಸ್ಥಲ (ನಿತ್ಯ ನಿರಂಜನ)

ಸೂಕ್ಷ್ಮ ಚಕ್ರಗಳು ಸಹಸ್ರದಳ ಚಕ್ರ, ಶಿಖಾ ಚಕ್ರ, ಪಶ್ಚಿಮ ಮತ್ತು ಅಣುಚಕ್ರ

ಈ ಸ್ಥಲಗಳು ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮ ಎಂಬುದು ಗಮನಿಸಬೇಕಾದ ಸಂಗತಿ. ಇದರ ಬಗೆಗೆ ಶರಣರ ವಚನಗಳನ್ನು ಇಲ್ಲಿ ಸ್ವಲ್ಪ ಅವಲೋಕಿಸಿದರೆ ಕೆಲವೊಂದು ಮಾಹಿತಿಗಳು ನಮಗೆ ಲಭ್ಯವಾಗುವುದು. ಸಾಮಾನ್ಯವಾಗಿ ಸಾಧಕನ ಕುಂಡಲಿನಿ ಶಕ್ತಿಯು ಮೂಲಾಧಾರದಿಂದ ಪ್ರಾರಂಭವಾಗಿ ಆಜ್ಞಾಚಕ್ರವನ್ನು ಭೇದಿಸುವುದು. ಅದರಂತೆಯೇ ಜೀವನದ ಸಾಧನ ಪಥವು ಭಕ್ತಸ್ಥಲದಿಂದ ಹಾದು ಐಕ್ಯಸ್ಥಲವನ್ನು ಮುಟ್ಟುವುದು. ಪ್ರತಿಯೊಂದು ಚಕ್ರವು (ಆತ್ಮದ ಶಕ್ತಿ ಕೇಂದ್ರಗಳು) ಜಾಗೃತವಾಗುವುದರೊಂದಿಗೆ ಆತ್ಮವು ಸಂಸ್ಕಾರಗೊಳ್ಳಬೇಕು ಇಲ್ಲದಿದ್ದರೆ ಸಾಧನೆಯಿಂದ ದೊರಕುವ ಫಲವು ವ್ಯತಿರಿಕ್ತ ಪರಿಣಾಮವನ್ನು ಅಥವ ಆತ್ಮನಲ್ಲಿ ಸಾಧನೆಯ ಅಹಂಕಾರವು ತಾಳುತ್ತದೆ ಎಂದು ಮತ್ತು ಪ್ರತಿಯೊಂದು ಚಕ್ರದ ಉನ್ನತಿಯೊಂದಿಗೆ ಚಕ್ರದ ಸಂಸ್ಕಾರ ಬಹುಮುಖ್ಯವೆಂದು ಶರಣರು ಕಂಡು ಕೊಂಡ ನಿಲುವು ಅಧ್ಭುತ. ಹೀಗೆ ಆತ್ಮವು ಬಲಗೊಂಡು ಕಾಯವೆಂಬ ಬಟ್ಟೆಯನ್ನು ವಿಸರ್ಜಿಸಿ ಪರಮನಲ್ಲಿ ಬೆರೆಯಲು ಸಶಕ್ತವಾಗುತ್ತದೆ. ಅದನ್ನು ಇಲ್ಲಿ ಸ್ಥಲಗಳ ನಿದರ್ಶದ ಮೂಲಕ ತೋಂಟದ ಸಿದ್ಧಲಿಂಗಯತಿಗಳು ವಿವರಿಸಿದ್ದಾರೆ.

ಭಕ್ತಿಸ್ಥಲ ಮಾಹೇಶ್ವರಸ್ಥಲದಲ್ಲಿ ಅಡಗಿ,
ಮಾಹೇಶ್ವರಸ್ಥಲ ಪ್ರಸಾದಿಸ್ಥಲದಲ್ಲಡಗಿ,
ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲದಲ್ಲಡಗಿ,
ಪ್ರಾಣಲಿಂಗಿಸ್ಥಲ ಶರಣಸ್ಥಲದಲ್ಲಡಗಿ,
ಶರಣಸ್ಥಲ ಐಕ್ಯಸ್ಥಲದಲ್ಲಡಗಿ,
ಇಂತೀ ಷಡಂಗಯೋಗ ಸಮರಸವಾಗಿ ಷಡುಸ್ಥಲವ ಮೀರಿ ನಿರವಯಸ್ಥಲವನೆಯ್ದಿ,
ಆ ನಿರವಯಸ್ಥಲ ನಿರಾಳದಲ್ಲಡಗಿ,
ಆ ನಿರಾಳ ನಿತ್ಯ ನಿರಂಜನ ಪರವಸ್ತು ತಾನಾಯಿತ್ತಾಗಿ,
ಕ್ರಿಯಾನಿಷ್ಪತ್ತಿ, ಜ್ಞಾನನಿಷ್ಪತ್ತಿ, ಭಾವನಿಷ್ಪತ್ತಿ
ಮಾಡುವ ಕ್ರೀಗಳೆಲ್ಲಾ ನಿಷ್ಪಟತ್ತಿಯಾಗಿ,
ಅರಿವ ಅರುಹೆಲ್ಲಾ ಅಡಗಿ,

ಭಾವಿಸುವ ಭಾವವೆಲ್ಲ ನಿರ್ಭಾವವಾಗೆ,
ನಿರ್ಲೇಪಕ ನಿರಂಜನ ವಸ್ತು ತಾನು ತಾನಾದಲ್ಲೆ,
ಧ್ಯಾನಿಸಲಿಕ್ಕೇನೂ ಇಲ್ಲ,
ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭು ತಾನೆ,
ಷಟ್ ಸ್ಥಲಜ್ಞಾನಸಾರಾಯ ಸ್ವರೂಪನೆಂದು ಹೇಳಲ್ಪಟ್ಟನು.

ಈ ರೀತಿಯಾಗಿ ಸಾಧನೆಯನ್ನು ಮಾಡಿದ ಅರ್ಥಾತ್ ಚಕ್ರಗಳನ್ನು ಭೇದಿಸಿದ ಮಹಾನುಭಾವಿಯನ್ನು ಮಹಾಭಕ್ತನೆಂದು, ಈ ಸ್ಥಲಗಳನ್ನು ಮುಟ್ಟಿದ ಶರಣನನ್ನು ಮಹಾಭಕ್ತಸ್ಥಲತಪರಿಣಿತನೆಂದು ಅಥವ 'ಷಟ್ ಸ್ಥಲಜ್ಞಾನಸಾರಾಯ ಸ್ವರೂಪ'ನೆಂದು ಶರಣರು ಕರೆದಿದ್ದಾರೆ. ಅಂತಹ ಮಹಾಭಕ್ತಸ್ಥಲವನ್ನು ಧರ್ಮಪಿತ ಗುರು ಬಸವಣ್ಣನವರು ಮುಟ್ಟಿದ್ದರು ಎಂಬುದು ವಚನಗಳಿಂದ ಸಾಬೀತಾಗುತ್ತದೆ. ಇಂತಹ ಮಹಾಗುರುವಿನ ನಲುವನ್ನು ಕಂಡ ತೋಂಟದಾರ್ಯರು ಬಸವಣ್ಣನವರನ್ನು ಹೀಗೆ ಸ್ಥುತಿಸಿದ್ದಾರೆ.

ಕಾಯಕ್ಕಾಧಾರ ಭಕ್ತ, ಜೀವಕ್ಕಕಾಧಾರ ಭಕ್ತ
ಕರಣಕ್ಕಾಧಾರ ಭಕ್ತ, ಲಿಂಗಕ್ಕಾಧಾರ ಭಕ್ತ
ಜಂಗಮಕ್ಕಾಧಾರ ಭಕ್ತ, ಪ್ರಸಾದಕ್ಕಾಧಾರ ಭಕ್ತ
ಶಕ್ತಿಗಾಧಾರ ಭಕ್ತ, ಭಕ್ತಿಗಾಧಾರ ಭಕ್ತ.
ನಾನು ನೀನೆನ್ನದೆ ನಿರವಯ ನಿರ್ಮಾಯನಯ್ಯ ಭಕ್ತನು
ಇಂತಪ್ಪ ಭಕ್ತ ಸಂಗನ ಬಸವಣ್ಣನ ಶ್ರೀಪಾದ ಪದ್ಮದಲ್ಲಿ
ಭ್ರಮರನಾಗಿರಿಸಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

ಇಂತಹ ಷಟಸ್ಥಲಗಳನ್ನು ಮೀರಿದ, ನವ ಚಕ್ರಗಳನ್ನು (ನವ ಸ್ಥಲಗಳನ್ನು) ಹಾದಿ ಪರಮಾತ್ಮನನ್ನು ಬೆರೆಯುವ, ಸರಳ ಮಾರ್ಗವನ್ನು ದಯಪಾಲಿಸಿದ ಗುರು ಬಸವ ತಂದೆಯ ಶ್ರೀ ಪಾದಗಳಿಗೆ ಕೋಟಿ ಶರಣು -ಶರಣಾರ್ಥಿಗಳು.

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297

ಅಲ್ಲಮಪ್ರಭುದೇವರ ಸ್ತುತಿ

– ಶೋಭಾ ಅರವಿಂದ್,
ಶಿವಮೊಗ್ಗ

ಅಲ್ಲಮಪ್ರಭುವಿನ ಗುಣಗಾನ । ಇದು ಕಲ್ಯಾಣ ಶರಣನ ಗುಣಗಾನ ।
ವೈರಾಗ್ಯ ಚಕ್ರವರ್ತಿಯ ಯಶೋಗಾನ । ವ್ಯೋಮಕಾಯನ ಸ್ತುತಿಸೋಣ ॥

ಬೆಳವಲನಾಡಿನ ಭಾಗ್ಯದ ಕಂದ । ಮದ್ದಳೆ ನುಡಿಸುವ ವಂಶದ ಚೆಂದ ।
ಶಿವನ ಧ್ಯಾನದಿ ಗೃಹವ ತೊರೆದ । ನಿರ್ದೇಹಿಯಾಗುವ ವಿದ್ಯೆಯ ಪಡೆದ ॥

ಮಾಯಾದೇವಿಯ ಮೋಹವ ಗೆಲಿದ । ಸಿದ್ದರಾಮನ ದರ್ಪವ ಇಳಿಸಿದ ।
ಗುಹೇಶ್ವರನೆಂದು ಅಂಕಿತವಿಟ್ಟು । ವಚನ ಸಾಹಿತ್ಯಕೆ ಕೊಡುಗೆಯ ಕೊಟ್ಟ ॥

ಕಲ್ಯಾಣ ಬಸವನ ಮನವನು ಗೆದ್ದು । ಶೂನ್ಯಸಿಂಹಾಸನ ಪೀಠವ ಅಲಂಕರಿಸಿದ ।
ಮಹಾದೇವಿಗೆ 'ಅಕ್ಕ' ಬಿರುದನು ಕೊಟ್ಟು। ಅನುಭವ ಮಂಟಪಕೆ ಆದ ಕಿರೀಟ ॥

ಶರಣರ ಪಾಲಿನ ಸುಜ್ಞಾನ ಜಂಗಮ । ವೈರಾಗ್ಯ ಪ್ರಭೆಯೊಳಗೆ ಆದನು ಅಲ್ಲಮ ।
ಮರ್ತ್ಯಲೋಕದಿ ಬೆಳಗಿದ ಕೀರುತಿ। ಕದಳಿಯ ವನದಲಿ ಬಯಲಾದ ಜ್ಯೋತಿ ॥ ಅಲ್ಲಮ ॥

****

ಅಕ್ಕಮಹಾದೇವಿ ಮಂಗಲ

ಜಯಮಾತೆ ಶ್ರೀ ಜಗನ್ಮಾತೆ । ಜಯತು ಜಯಶ್ರೀ ಮಹಾಮಾತೆ ।
ಉಡುತಡಿ ಕುಡಿಯೆ ಶ್ರೀಮಾತೆ । ವೈರಾಗ್ಯ ನಿಧಿಯೆ ಮಹಮಾತೆ ॥

ಮಲೆನಾಡ ಮಗಳೆ ಮಹದೇವಿ । ಗುರುಬಸವಣ್ಣನ ಸುಚಿತ್ತದ ಪುತ್ಥಳಿ ।
ಕನ್ನಡನಾಡಿನ ಪ್ರಥಮ ಕವಿಯಿತ್ರಿ । ಬಸವಧರ್ಮದ ವಚನದ ಧಾತ್ರಿ ॥

ಮಲ್ಲಿಕಾರ್ಜುನನ ಚೆಂದದ ಸತಿಯು । ಶರಣ ಸಂಕುಲದ ಭಕ್ತಿಯ ದೀಪ್ತಿಯು ।
ಕಾರುಣ್ಯದಾಕಡಲು ಮಹಾದೇವಿ । ಕಲ್ಯಾಣದ ಕಣ್ಮಣಿ ಮಹಾದೇವಿ ॥

ಕೌಶಿಕರಾಜನ ಜಂಭವ ಮುರಿದೆ । ನಶ್ವರ ತನುವಿಗೆ ಹೆಡೆಮುರಿ ಕಟ್ಟಿದೆ ।
ವಚನಗಳ ಸರಮಾಲೆ ಲೋಕಕೆಕೊಟ್ಟೆ । ಚೆನ್ನಮಲ್ಲಿಕಾರ್ಜುನ ಅಂಕಿತ ಇಟ್ಟೆ ॥

ಕಾಮನಗೆಲಿದು ನಿಃಕಾಮಿಯಾದೆ । ಅನುಭವಮಂಟಪದಿ ಪ್ರಜ್ವಳಲಾದೆ ।
ಶರಣರ ಸಮ್ಮುಖದಿ ಬಿರುದನು ಪಡೆದೆ । ಅಕ್ಕಮಹಾದೇವಿಯು ನೀನಾದೆ ॥

ಮಧುರಭಕ್ತಿಯ ಮಂದಾಕಿನಿಯಾದೆ। ಯೋಗಾಂಗತ್ರಿವಿಧಿಯ ಕರ್ತೃವು ನೀನಾದೆ ।
ಶಿವಮುಡಿಯೇರಿ ಶಿವಶರಣೆಯಾದೆ । ಕದಳಿಯ ಬನದಲಿ ಪರಂಜ್ಯೋತಿಯಾದೆ॥

ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೆ,
ಭವಬಂಧನವ ಬಿಡಿಸಿ ಪರಮಸುಖವ ತೋರಿದ ಗುರುವೆ,
ಭವಿಯೆಂಬುದ ತೊಡೆದು ಭಕ್ತೆ ಎಂದೆನಸಿದ ಗುರುವೆ,
ಚೆನ್ನಮಲ್ಲಿಕಾರ್ಜುನನ ತಂದೆನ್ನ ಕೈವಶಕ್ಕೆ ಕೊಟ್ಟ ಗುರುವೆ ನಮೋ, ನಮೋ.

ಬಸವ ಪಂಚಮಿಯ ಸಿಹಿ ಕ್ಷಣಗಳು









August Sanchike Published on 08-08-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/2015-17, wpp-17
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th, 20th of every month, Pages 32+4